ಅನುಬಂಧ - 2

ನುಸಿ ಬಾದೆಯ ಪ್ರಮಾಣವನ್ನು ತಿಳಿಯಲು ಎಲ್ಲಾ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಸಮೀಕ್ಷೆ ತಂಡಗಳ ಮೂಲಕ ಗಣತಿ ಮಾಡಲಾಗುತ್ತದೆ. ಇದರಂತೆ ಪ್ರಸಕ್ತ ರಾಜ್ಯದ 14 ಜಿಲ್ಲೆಗಳಲ್ಲಿ 65 ಲಕ್ಷ ತೆಂಗಿನ ಮರಗಳು ನುಸಿ ಪೀಡೆಗೆ ಒಳಗಾಗಿದೆ ಎಂದು ಸಮೀಕ್ಷಿಸಲಾಗಿದೆ. ಈ ನುಸಿ ಭಾದೆಯು ಗಮನಕ್ಕೆ ಬಂದ ಕೂಡಲೇ ಕೃಷಿ ವಿಶ್ವವಿದ್ಯಾಲಯದ ತಜ್ಞರೊಂದಿಗೆ ವ್ಯಾಪಕವಾಗಿ ಚರ್ಚಿಸಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ರೂಪು ರೇಷೆಗಳನ್ನು ತಯಾರಿಸಲಾಯಿತು. ತೆಂಗು ಬೆಳೆಯುವ ಮುಖ್ಯ ಜಿಲ್ಲೆಗಳಲ್ಲಿ ವಿಶ್ವ ವಿದ್ಯಾನಿಲಯದ ತಜ್ಞರೊಂದಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ವಿವಿಧ ಪ್ರಚಾರ ಮಾಧ್ಯಮಗಳ ಮೂಲಕವೂ ಸಹ ರೈತರಿಗೆ ನುಸಿ ಭಾದೆಯನ್ನು ಹತೋಟಿಗೆ ತರುವ ಬಗ್ಗೆ ಮಾಹಿತಿ ನೀಡಲಾಯಿತು. ರೈತರಲ್ಲಿ ಜಾಗೃತಿ ಮೂಡಿಸಲು ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ಕರ್ನಾಟಕ ಸರ್ಕಾರವು ನುಸಿ ಭಾದಿತ ಜಿಲ್ಲೆಗಳಲ್ಲಿ ಸಾಮೂಹಿಕವಾಗಿ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ರೈತರಿಗೆ ಶೇ.50 ರ ರಿಯಾಯಿತಿಗಳಲ್ಲಿ ಕೀಟನಾಶಕಗಳನ್ನು ಒದಗಿಸಲು 375 ಲಕ್ಷ ರೂ.ಗಳ ಯೋಜನೆಗೆ ಮಂಜೂರಾತಿ ನೀಡಿದೆ. ಈ ಯೋಜನೆಯಡಿ 244 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಸಾಮೂಹಿಕವಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಕ್ಷೇತ್ರ ಮಟ್ಟದಲ್ಲಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮಾತ್ರವೇ ಮಾಡಲು ಅಸಾಧ್ಯವಾಗುವುದರಿಂದ ಇತರೆ ಇಲಾಖೆಯ ಸಿಬ್ಬಂದಿ ಮತ್ತು ವಾಹನಗಳನ್ನು ಒಳಗೊಂಡಂತೆ ತಂಡವನ್ನು ರಚಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯವರನ್ನು ಒಳಗೊಂಡಂತೆ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸಿ ಈ ಸಮಿತಿಯ ಮುಖೇನ ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲಾ ಸಿದ್ದತೆಗಳನ್ನು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗಿದೆ. ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳ ಮಟ್ಟದಲ್ಲಿ ಉಪ ಸಮಿತಿಗಳನ್ನು ರಚಿಸಿ ಇವುಗಳ ಮುಖೇನ ಪರಿಣಾಮಕಾರಿಯಾಗಿ ರೈತರ ತೋಟಗಳಲ್ಲಿ ನುಸಿ ಭಾದೆ ಹತೋಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಪ್ರತಿಯೊಂದು ಅಂಶದ ಬಗ್ಗೆ ವಿವರವಾದ ತಾಂತ್ರಿಕ ಸೂಚನೆಗಳನ್ನು ಒಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದ್ಯದಲ್ಲಿ ನುಸಿ ಭಾದಿತ ಎಲ್ಲಾ ಜಿಲ್ಲೆಗಳಲ್ಲಿ ಹತೋಟಿ ಕಾರ್ಯಕ್ರಮವು ಈಗಾಗಲೇ ಜಾರಿಗೊಳಿಸಿದ್ದು, ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ಒಟ್ಟಿನಲ್ಲಿ ಸರ್ಕಾರವು ನುಸಿ ಬಾದೆ ವಿಷಯವನ್ನು ಅತ್ಯಂತ ಗಂಬೀರವಾಗಿ ಪರಿಗಣಿಸಿದ್ದು, ನುಸಿ ಭಾದೆಯನ್ನು ಹತೋಟಿಗೆ ತರಲು ಬೇಕಾದ ಎಲ್ಲಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡು ರಾಜ್ಯದಲ್ಲಿ ತೆಂಗು ಬೆಳೆಯನ್ನು ರಕ್ಷಿಸಿ ರೈತರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ ಮತ್ತು ಈ ದಿಸೆಯಲ್ಲಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದೆ.

ಸಿಂಧಗಿ ತಾಲ್ಲೂಕಿನಲ್ಲಿ ಅತಿವೃಷ್ಟಿ

554 - ಶ್ರೀ ಸುನಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ 1997-98 ಹಾಗೂ 1998-99ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಬಿದ್ದ ಮನೆಗಳ ಸಂಖ್ಯೆ ಎಷ್ಟು? ಭಾಗಶಃ ಬಿದ್ದ ಮನೆಗಳಿಗೆ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ?

ಆ) ಪೂರ್ತಿಯಾಗಿ ಬಿದ್ದ ಮನೆಗಳ ಸಂಖ್ಯೆ ಎಷ್ಟು? ಪ್ರತಿಯೊಂದು ಮನೆಗೆ ಕೊಡಬೇಕಾದ ಸರ್ಕಾರದ ಹಣವೆಷ್ಟು?

ಇ) ಪೂರ್ತಿಯಾಗಿ ಬಿದ್ದ ಮನೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಈ) ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ, ಯಾವಾಗ ಸರ್ಕಾರ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 97-98 ಹಾಗೂ 98-99ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿನಲ್ಲಿ ಅತೀವೃಷ್ಟಿಯಿಂದ ಬಿದ್ದ ಮನೆಗಳ ಸಂಖ್ಯೆ 16393. ಅತಿವೃಷ್ಟಿಯಿಂದ ಭಾಗಶಃ ಪೂರ್ತಿ ಬಿದ್ದ ಮನೆಗಳ ಸಂತ್ರಸ್ಥರಿಗೆ ಪರಿಹಾರ ನೀಡಲು ರೂ. 86.00 ಲಕ್ಷ ಅನುದಾನ ಇರುತ್ತದೆ.

ಆ) 795. ಪ್ರತಿಯೊಂದು ಪೂರ್ಣ ಬಿದ್ದ ಮನೆಗೆ ಸರ್ಕಾರವು 10,000 ರೂ.ಗಳಂತೆ ಹಣ ಬಿಡುಗಡೆ ಮಾಡಲಾಗುತ್ತಿದೆ.

ಇ) ಸಿಂಧಗಿ ತಾಲ್ಲೂಕಿಗೆ ಬಿಡುಗಡೆ ಮಾಡಲಾದ ಹಣ 8.00 ಲಕ್ಷಗಳು.

ಈ) ಇದಲ್ಲದೆ ಸಮಾಜ ಕಲ್ಯಾಣ ನಿರ್ದೇಶನಾಲಯ ಇವರಿಂದ ಪರಿಶಿಷ್ಟ ಪಂಗಡದವರಿಗೆ ಮನೆಗಳ ನಿರ್ಮಾಣಕ್ಕಾಗಿ ಸಹಾಯ ಧನವನ್ನು ಒಟ್ಟು 7.90 ಲಕ್ಷ ಹಣವನ್ನು ಮಂಜೂರು ಮಾಡಿರುತ್ತಾರೆ.

ಸಿಂಧಗಿ ತಾಲ್ಲೂಕಿನಲ್ಲಿ ವಿಫಲ ಬಾವಿಗಳಿಗೆ ಅನುದಾನ

555 - ಶ್ರೀ ಸುನಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಹತ್ತು ವರ್ಷದಿಂದ ಮಂಜೂರಾದ ಬಾವಿಗಳ ಸಂಖ್ಯೆ ಎಷ್ಟು?

ಆ) ಅದರಲ್ಲಿ ವಿಫಲ ಬಾವಿಗಳ ಸಂಖ್ಯೆ ಎಷ್ಟು?

ಇ) ವಿಫಲ ಬಾವಿಗಳಿಗಾಗಿ ಸರ್ಕಾರವು ಅನುದಾನ ನೀಡುತ್ತದೆಯೇ?

ಈ) ಹತ್ತು ವರ್ಷದಿಂದ ವಿಫಲ ಬಾವಿಗಳಿಗಾಗಿ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ? ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ?

ಉ) ಹತ್ತು ವರ್ಷದಿಂದ ಹಣ ಬಿಡುಗಡೆಯಾಗದೆ ಇರುವುದಕ್ಕೆ ಕಾರಣವೇನು?

ಊ) ಹಣ ಬಿಡುಗಡೆ ಮಾಡಿ ರೈತರಿಗೆ ಯಾವಾಗ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) 679

ಆ) 251

ಇ) ಹೌದು (ಸಣ್ಣ ರೈತರು : ಅತಿ ಸಣ್ಣ ರೈತರು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರೆಗೆ ಮಾತ್ರ)

ಈ) ಬಿಡುಗಡೆ ಮಾಡಿದ ಮೊತ್ತ ರೂ.14.51 ಲಕ್ಷ.

ಬಿಡುಗಡೆ ಮಾಡಲು ಬಾಕಿ ಇದ್ದ ಮೊತ್ತ ರೂ.70.31 ಲಕ್ಷ.

ಉ) ಹಣವನ್ನು ಬೇಡಿಕೆಗನುಗುಣವಾಗಿ ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಊ) ಶೀಘ್ರದಲ್ಲಿಯೇ ಅನುಕೂಲ ಮಾಡಿ ಕೊಡಲಾಗುವುದು.

ಸಿಂಧಗಿ ಮತಕ್ಷೇತ್ರದಲ್ಲಿ ನಿವೇಶನ ಹಾಗೂ ಕಟ್ಟಡ ಕುರಿತು

556 - ಶ್ರೀ ಸುನಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ, ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಹತ್ತು ಸಾವಿರ ಕಡು ಬಡುವರ ಅರ್ಜಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಿಂಧಗಿ ಪಟ್ಟಣಕ್ಕೆ ಸಂಬಂಧಪಟ್ಟ ನಾಲ್ಕು ಸಾವಿರ ನಿವೇಶನಗಳಿದ್ದ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟ ಆರು ಸಾವಿರ ಒಟ್ಟು ಹತ್ತು ಸಾವಿರ ಮನೆಗಳ ನಿರ್ಮಾಣ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಅದರಲ್ಲಿ ಪಟ್ಟಣಕ್ಕೆ ಸಂಬಂಧಪಟ್ಟಂತೆ ಹಾಗೂ ಗ್ರಾಮೀಣ ಪ್ರದೇಶಕ್ಕೆ ಸಂಬಂಧ ಪಟ್ಟಂತೆ ಎಷ್ಟು ಮನೆಗಳ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹೌದು

ಆ) ನಗರ, ಪಟ್ಟಣ ಪ್ರದೇಶಗಳಲ್ಲಿ ವಸತಿರಹಿತರ ಆರ್ಥಿಕ ದುರ್ಬಲ ವರ್ಗದ ಬಡವರಿಗೆ, ಆಶ್ರಯ ಯೋಜನೆಯಡಿ ಫಲ ದೊರಿಕಿಸುವ ಸಲುವಾಗಿ ಸರ್ವೆ ಪ್ರಕಾರ ಗುರುತಿಸಲಾದ ಫಲಾನುಭವಿಗಳ ಸಂಖ್ಯೆಯು 2237 ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಸಹಾ ಬಂದಿರುವ ಅರ್ಜಿಗಳನ್ನು ಅರ್ಹ ಫಲಾನುಭವಿಗಳನ್ನು ಅಯ್ಕೆ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

1999-2000ನೇ ಸಾಲಿನಲ್ಲಿ ಇಂದಿರಾ ಅವಾಜ್ ಯೋಜನೆಗಾಗಿ 200 ಹೊಸ ಮನೆಗಳ ನಿರ್ಮಾಣ ಹಾಗೂ 100 ಕಚ್ಚಾಮನೆ ಹಾಗೂ ಪಕ್ಕಾ ಮನೆ ಮಾಡುವ ಕಾರ್ಯ ಕ್ರಮ ಡಾ॥ ಅಂಬೇಡ್ಕರ್ ಯೋಜನೆಯಡಿಯಲ್ಲಿ 146 ಮನೆಗಳ ನಿರ್ಮಾಣ ಹಾಗೂ ಅಶ್ರಯ ಯೋಜನೆಯಡಿಯಲ್ಲಿ 400 ಮನೆಗಳನ್ನು ನಿರ್ಮಾಣ ಮಾಡಲು ಕೈಗೆತ್ತಿಕೊಳ್ಳಲಾಗಿದೆ.

ರಾಷ್ಟ್ರೀಯ ಸಾಮಾಜಿಕ ಕುಟುಂಬ ನೆರವು ಯೋಜನೆ

557 - ಶ್ರೀ. ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಸಾಮಾಜಿಕ ಕುಟುಂಬ ನೆರವು ಯೋಜನೆಯಡಿಯಲ್ಲಿ ಬಂದಂತಹ ಅರ್ಜಿಗಳೆಷ್ಟು? ಅವರುಗಳಿಗಾಗಿ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಉಳಿದ ಹಣವನ್ನು ಎಷ್ಟು ದಿವಸಗಳಲ್ಲಿ ಸರ್ಕಾರವು ಮಂಜೂರು ಮಾಡಲಿದೆ?

ಆ) 1999-2000ನೇ ಸಾಲಿಗಾಗಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ ಆಡಿಯಲ್ಲಿ ಎಷ್ಟು ಹಣ ಎಷ್ಟು ಅರ್ಜಿದಾರರಿಗೆ ಬಿಡುಗಡೆ ಮಾಡಲಾಗಿದೆ? ಉಳಿದ ಹಣವನ್ನು ಉಳಿದ ಅರ್ಜಿಗಳಿಗಾಗಿ ಸರ್ಕಾರ ಎಷ್ಟು ದಿವಸಗಳ ಒಳಗಾಗಿ ಮಂಜೂರು ಮಾಡಲಾಗುತ್ತದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಸಿಂಧಗಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿಯಲ್ಲಿ 279 ಅರ್ಜಿಗಳು ಬಂದಿವೆ. 109 ಫಲಾನುಭವಿಗಳಿಗೆ 10.15 ಲಕ್ಷ ರೂ.ಗಳನ್ನು ಸರ್ಕಾರದಿಂದ ವೆಚ್ಚ ಮಾಡಲಾಗಿದೆ. ಉಳಿದ ಮೊತ್ತವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಲಾಗುವುದು.

ಆ) 1999-2000ನೇ ಸಾಲಿನಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿಯಲ್ಲಿ 4564 ಅರ್ಜಿದಾರರಿಗೆ 33.65 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಅರ್ಜಿಗಳಿಗೆ ಹಣವನ್ನು ಸರ್ಕಾರವು ಮುಂದಿನ ಆರ್ಥಿಕ ವರ್ಷದಲ್ಲಿ ನೀಡುವುದು.

ಅಂಡರ್ ವ್ಯಾಲುವೇಷನ್ ಪ್ರಕರಣಗಳು

559 - ಶ್ರೀ ಬಿ. ಸೋಮಶೇಕರ್ (ಮಳವಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸ್ಟಾಂಪ್ ಆ್ಯಕ್ಟ್ 1957ರ ಸೆಕ್ಷನ್ 45-ಎ ಗೆ ತಿದ್ದುಪಡಿ ತರುವುದಕ್ಕೆ ಮೊದಲು ಇದ್ದ ಅಂಡರ್ ವ್ಯಾಲ್ಯುವೇಷನ್ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು?*

ಆ) *ತಿದ್ದುಪಡಿ ತಂದಮೇಲೆ ಎಷ್ಟು ಪ್ರಕರಣಗಳು ಕಡಿಮೆಯಾಗಿದೆ : ಹಾಗೂ ಈಗಿರುವ ಹೊಸ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)*

ಶ್ರೀ ಹೆಚ್.ಸಿ ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಸ್ಟಾಂಪ್ ಆಕ್ಟ್ 1957ರ ಸೆಕ್ಷನ್ 45-ಎಗೆ ತಿದ್ದುಪಡಿ ತರುವ ಮೊದಲು 50,439 ಅಂಡರ್ ವ್ಯಾಲುವೇಷನ್ ಪ್ರಕರಣಗಳು ಬಾಕಿ ಇದ್ದವು.

ಆ) ತಿದ್ದುಪಡಿಯ ಮುಂಚೆ ಸರಾಸರಿ ಮಾಹೆಯಾನ 2423 ಪ್ರಕರಣಗಳನ್ನು ರಾಜ್ಯದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳವರಿಗೆ ಉಲ್ಲೇಖಿಸಲಾಗುತ್ತಿತ್ತು. ತಿದ್ದುಪಡಿ ತಂದ ನಂತರ ಮಾಹೆಯಾನ ಸರಾಸರಿ 710 ಪ್ರಕರಣಗಳನ್ನು ಜಿಲ್ಲಾ ನೋಂದಣಾಧಿಕಾರಿಗಳವರೆಗೆ (ರಾಜ್ಯದಲ್ಲಿ) ಉಲ್ಲೇಖಿಸಲಾಗುತ್ತಿದೆ. ಅಂದರೆ ಪ್ರತಿಮಾಹೆ ಶೇಕಡ 71 ಪ್ರಕರಣಗಳು ಕಡಿಮೆಯಾಗಿವೆ. ಈಗಿರುವ ಹೊಸ ಪ್ರಕರಣಗಳ ಜಿಲ್ಲಾವಾರು ಸಂಖ್ಯೆಯು ಈ ಕೆಳಕಂಡಂತದೆ :

ಕ್ರಮ ಸಂಖ್ಯೆ	ಜಿಲ್ಲೆ	ಹೊಸ ಪ್ರಕರಣಗಳು
1.	ಬೆಳಗಾಂ	238
2.	ಬಳ್ಳಾರಿ	125
3.	ಬೀದರ್	ಇಲ್ಲ
4.	ಬಿಜಾಪುರ	277
5.	ಬಾಗಲಕೋಟೆ	44
6.	ಚಿಕ್ಕಮಗಳೂರು	54
7.	ಚಿತ್ರದುರ್ಗ	101
8.	ದಾವಣಗೆರೆ	32
9.	ಧಾರವಾಡ	173
10.	ಗದಗ	37
11.	ಹಾವೇರಿ	120
12.	ಗುಲ್ಬರ್ಗಾ	47

ಕ್ರಮ ಸಂಖ್ಯೆ	ಜಿಲ್ಲೆ	ಹೊಸ ಪ್ರಕರಣಗಳು
13.	ಹಾಸನ	74
14.	ಕಾರವಾರ	81
15.	ಕೋಲಾರ	21
16.	ಮಂಡ್ಯ	90
17.	ಮಂಗಳೂರು	73
18.	ಉಡುಪಿ	65
19.	ಮಡಕೇರಿ	5
20.	ಮೈಸೂರು	239
21.	ಚಾಮರಾಜನಗರ	5
22.	ರಾಯಚೂರು	59
23.	ಕೊಪ್ಪಳ	100
24.	ಶಿವಮೊಗ್ಗ	130
25.	ತುಮಕೂರು	171
26.	ಬೆಂಗಳೂರು (ಗ್ರಾಮಾಂತರ)	55
27.	ಶಿವಾಜಿನಗರ (ಡಿಯುಎಸ್)	115
28.	ರಾಜಾಜಿನಗರ (ಡಿಯುಎಸ್)	327
29.	ಗಾಂಧಿನಗರ (ಡಿಯುಎಸ್)	170
30.	ಜಯನಗರ (ಡಿಯುಎಸ್)	57
	ಒಟ್ಟು	**2842**

ಶೌಚಾಲಯ ನಿರ್ಮಾಣ

561 - ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಪಟ್ಟಣದಲ್ಲಿರುವ ಬಸ್ ನಿಲ್ದಾಣದಲ್ಲಿ ಶೌಚಾಲಯ ನಿರ್ಮಿಸಿ 3-4 ವರ್ಷಗಳಾದರೂ ಅದನ್ನು ಸಾರ್ವಜನಿಕರ ಉಪಯೋಗಕ್ಕೆ ಬಳಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು.) :

ಅ) ಹೌದು.

ಶೌಚಾಲಯದಿಂದ ಹೊರ ಬರುವ ಕೊಳಚೆ ನೀರನ್ನು ಹೊರ ಸಾಗಿಸುವ ಸಮಸ್ಯೆಯನ್ನು ಬಗೆ ಹರಿಸಿದರೂ ಸಹ ಬಸ್ ನಿಲ್ದಾಣದಲ್ಲಿರುವ ಕೊಳವೆ ಬಾವಿಯಲ್ಲಿನ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ, ಹೊಸ ಶೌಚಾಲಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಿಟ್ಟು ಕೊಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಕೊಳವೆ ಬಾವಿಯನ್ನು ಮರು ಕೊರೆದು ನೀರಿನ ಪ್ರಮಾಣ ಹೆಚ್ಚಾದಲ್ಲಿ, ಹೊಸ ಶೌಚಾಲಯುವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಿಟ್ಟುಕೊಡಲಾಗುವುದು.

ಪಿರಿಯಾ ಪಟ್ಟಣದ ಅಂಗನವಾಡಿ ಕೇಂದ್ರಗಳು

162 - ಶ್ರೀ ಬಸವರಾಜು ಹೆಚ್.ಪಿ. (ಪಿರಿಯಾಪಟ್ಟಣ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಸ್ವಂತ ಕಟ್ಟಡ ಹೊಂದಿರುವ ಕೇಂದ್ರಗಳ ಸಂಖ್ಯೆ ಎಷ್ಟು? ಮತ್ತು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳಿಗೆ ಸ್ವಂತ ಕಟ್ಟಡ ಒದಗಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ. ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಂದ ಅನುಮೋದಿಸಲ್ಪಟ್ಟಿದೆ) :

ಅ) 266.

ಆ) ಅವುಗಳಲ್ಲಿ 89 ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದು ಬಾಡಿಗೆ ಕಟ್ಟಡಗಳಲ್ಲಿ ಯಾವ ಕೇಂದ್ರಗಳೂ ನಡೆಯುತ್ತಿರುವುದಿಲ್ಲ.

ಇ) ಜಿಲ್ಲಾ ಪಂಚಾಯತ್ ವತಿಯಿಂದ ಹಂತಹಂತವಾಗಿ ಕಟ್ಟಡ ನಿರ್ಮಾಣದ ಕುರಿತು ಕ್ರಮಕೈಗೊಳ್ಳಲಾಗುವುದು.

ಉಡುಪಿಯಲ್ಲಿ ರಾಜ್ಯಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ

564 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಕೇಂದ್ರವಾಗಿರುವ ಉಡುಪಿಯಲ್ಲಿ ದಿನವೊಂದರಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಎಷ್ಟು ಬಸ್‌ಗಳು ನಿಲ್ದಾಣವನ್ನು ಪ್ರವೇಶಿಸುತ್ತಿದೆ, ವಿವರ ನೀಡುವುದು?

ಆ) ಈ ಬಸ್‌ಗಳು ಉಡುಪಿಗೆ ಬಂದು ಹೋಗಲು ರಾಜ್ಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಜಾಗವಿದೆಯೆ?

ಇ) ಇಲ್ಲವಾದಲ್ಲಿ ಪುಣ್ಯಕ್ಷೇತ್ರವಾಗಿರುವ ಉಡುಪಿಗೆ ಲಕ್ಷಾಂತರ ಯಾತ್ರಾರ್ಥಿಗಳು ಬರುತ್ತಿದ್ದು, ಈವರೆಗೂ ರಾಜ್ಯ ಸಾರಿಗೆ ಸಂಸ್ಥೆ ತನ್ನದೇ ಆದ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ.ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) 96 ಬಸ್ಸುಗಳು ಉಡುಪಿ ಬಸ್ಸು ನಿಲ್ದಾಣಕ್ಕೆ ಬಂದು ಹೋಗುತ್ತಿವೆ.

ಆ) ಉಡುಪಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವಿರುವುದಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪುರಸಭಾ ಬಸ್ ನಿಲ್ದಾಣವನ್ನು ಉಪಯೋಗಿಸುತ್ತಿದ್ದು ಅದರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಸಾಕಷ್ಟು ಸ್ಥಳಾವಕಾಶವಿದೆ.

ಇ) ಜಾಗವು ದೊರೆತನಂತರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ರಾಜ್ಯ ಸಾರಿಗೆ ಸಂಸ್ಥೆಯ ಖರೀದಿ ವಿಭಾಗದಲ್ಲಿ ಆಗುವ ಅವ್ಯವಹಾರಗಳು

565 - ಶ್ರೀ. ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಾರಿಗೆ ನಿಗಮದ ಖರೀದಿ ವಿಭಾಗದಲ್ಲಿ ಆಗುತ್ತಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದೆ ಈ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸುವುದಾಗಿ ಸರ್ಕಾರ ಆಶ್ವಾಸನೆ ನೀಡಿದ್ದು ನಿಜವೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಈ) ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತುಗೊಳಿಸಬೇಕೆಂದು ಹಿಂದಿನ ಸಾರಿಗೆ ಸಚಿವರು ಮುಖ್ಯ ಕಾರ್ಯದರ್ಶಿಗಳಿಗೆ ಬರೆದ ಪತ್ರದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬಂದಿತ್ತು.

ಆ) ಹೌದು.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಾಮಗ್ರಿಗಳ ಖರೀದಿಯಲ್ಲಿ ನಡೆದ

ಅವ್ಯವಹಾರದ ಬಗ್ಗೆ ಸಿ.ಓ.ಡಿ.ಯು ತನ್ನ ವಿಚಾರಣೆಗಾಗಿ ವಹಿಸಲಾಗಿತ್ತು. ಸಿ.ಓ.ಡಿ.ಯು ತನ್ನ ವಿಚಾರಣಾ ವರದಿಯನ್ನು ನೀಡಿದೆ. ಮಾಡಲಾದ ಅಪಾದನೆಗಳು ಸಿದ್ಧಪಟ್ಟಿಲ್ಲ ಆದುದರಿಂದ ಈ ವಿಷಯವನ್ನು ಕೈಬಿಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ತೋಟಗಾರಿಕಾ ಫಾರ್ಮುಗಳ ಅವ್ಯವಸ್ಥೆ

566 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ತೋಟಗಾರಿಕಾ ಫಾರ್ಮುಗಳ ಸಂಖ್ಯೆ ಎಷ್ಟು? ಅವುಗಳು ಎಲ್ಲೆಲ್ಲಿ ಇವೆ? (ವಿವರ ನೀಡುವುದು)

ಆ) ಈ ಫಾರ್ಮುಗಳ ಅಭಿವೃದ್ಧಿಗೆ ಇಲಾಖಾ ತೆಗೆದುಕೊಂಡ ಕ್ರಮಗಳೇನು?

ಇ) ಈ ಫಾರ್ಮುಗಳಲ್ಲಿ ಅಗತಕ್ಕ ಉತ್ಪಾದನೆಗಳ ಶೇಕಡ 75 ಕಳ್ಳತನವಾಗಿ ಸರ್ಕಾರಕ್ಕೆ ಬರಬೇಕಾದ ಆದಾಯ ಕುಂಠಿತವಾಗಿರುವುದು ನಿಜವೇ?

ಈ) ಈ ಫಾರ್ಮುಗಳ ಆಯವ್ಯಯದ ಬಗ್ಗೆ ಎಷ್ಟು ವರ್ಷಗಳಿಂದ ಲೆಕ್ಕಪತ್ರ ಪರಿಶೋಧನಾ ವರದಿಗಳು ಬಾಕಿ ಇವೆ. ಇವುಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 397 ತೋಟಗಾರಿಕೆ ಕ್ಷೇತ್ರ : ಸಸ್ಯಾಗಾರಗಳು ಇರುತ್ತವೆ. ಇವುಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದು ಜಿಲ್ಲಾವಾರು ವಿವರಗಳನ್ನು ಅನುಬಂಧ - 1 ರಲ್ಲಿ ನಮೂದಿಸಿದೆ.

ಆ) ರಾಜ್ಯದಲ್ಲಿ ಒಟ್ಟು 397 ತೋಟಗಾರಿಕೆ ಕ್ಷೇತ್ರ ಸಸ್ಯಾಗಾರಗಳ ಪೈಕಿ 231 ತೋಟಗಾರಿಕಾ ಕ್ಷೇತ್ರ ಸಸ್ಯಾಗಾರಗಳು ರಾಜ್ಯವಲಯ ವ್ಯಾಪ್ತಿಯಲ್ಲಿಯೂ ಇರುತ್ತವೆ. 166 ತೋಟಗಾರಿ ಕ್ಷೇತ್ರ ಸಸ್ಯಾಗಾರಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿಯೂ ಇರುತ್ತವೆ. ಈ ಕ್ಷೇತ್ರ ಸಸ್ಯಾಗಾರಗಳ ಒಟ್ಟು ವಿಸ್ತೀರ್ಣ 7010.82 ಹೆಕ್ಟೇರ್‌ಗಳಾಗಿದ್ದು, ಇದುವರೆವಿಗೂ 4000 ಹೆಕ್ಟೇರ್ ಪ್ರದೇಶವನ್ನು ವಿವಿಧ ಜಾತಿಯ ಹಣ್ಣಿನ : ತೋಟದ ಬೆಳೆಗಳನ್ನು ನೆಟ್ಟು ಅಭಿವೃದ್ಧಿ ಪಡಿಸಲಾಗಿದೆ. ಈ ಕ್ಷೇತ್ರ : ಸಸ್ಯಾಗಾರಗಳ ಪಾಲನೆ ಹಾಗೂ ಉಳಿಕೆ ಪ್ರದೇಶವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಲು ಯೋಜನೇತರ ಹಾಗೂ ವಿವಿಧ ಯೋಜನೆಗಳಲ್ಲಿ ಪ್ರತಿ ವರ್ಷ ಹಂತ ಹಂತವಾಗಿ ಅಭಿವೃದ್ಧಿಗೆ ಕಾರ್ಯಕ್ರಮ ಹಾಕಿಕೊಳ್ಳಲಾಗುತ್ತಿದೆ. ಅಂದರೆ ಮೂಲಭೂತ ಸೌಕರ್ಯ, ಹೊಸದಾಗಿ ಗಿಡ ನೆಡುವುದು ಮುಂತಾದವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರಸಕ್ತವಾಗಿ ಅಂದರೆ 1999-2000ನೇ ಸಾರಿಗೆ ರೂ. 276.98 ಲಕ್ಷಗಳ ಕಾರ್ಯಕ್ರಮವು ಹಮ್ಮಿಕೊಳ್ಳಲಾಗಿದೆ.

ಇ) ನಿಜವಲ್ಲ.

ಈ) ರಾಜ್ಯವಲಯಕ್ಕೆ ಸೇರಿದ ಒಟ್ಟು 231 ತೋಟಗಾರಿಕೆ ಕ್ಷೇತ್ರ : ಸಸ್ಯಾಗಾರಗಳ ಲೆಕ್ಕ ತಪಾಸಣೆಯನ್ನು ತೋಟಗಾರಿಕೆ ನಿರ್ದೇಶನಾಲಯದಿಂದ ನಡೆಸಲಾಗುತ್ತಿದೆ. ಉಳಿದ 166 ತೋಟಗಾರಿಕೆ ಕ್ಷೇತ್ರಗಳು : ನರ್ಸರಿಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಇವುಗಳ ಲೆಕ್ಕ ತಪಾಸಣೆಯನ್ನು ಆಯಾಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳೇ ನಿರ್ವಹಿಸುತ್ತಾರೆ.

ರಾಜ್ಯ ವಲಯಕ್ಕೆ ಸೇರಿದ ಲೆಕ್ಕ ತಪಾಸಣೆ ಬಾಕಿಯಿರುವ ತೋಟಗಾರಿಕೆ ಕ್ಷೇತ್ರಗಳ :ನರ್ಸರಿಗಳ ವಿವರ ಈ ಕೆಳಕಂಡಂತೆ ಇದೆ.

	ತೋಟಗಾರಿಕೆ ಕ್ಷೇತ್ರ ನರ್ಸರಿಗಳ ಸಂಖ್ಯೆ
1) 1 ವರ್ಷದ ಲೆಕ್ಕ ತಪಾಸಣೆ ಬಾಕಿಯಿರುವುದು	30
2) 2 ವರ್ಷದ ಲೆಕ್ಕ ತಪಾಸಣೆ ಬಾಕಿಯಿರುವುದು	53
3) 3 ವರ್ಷಗಳ ಲೆಕ್ಕ ತಪಾಸಣೆ ಬಾಕಿಯಿರುವುದು	28
4) 4 ವರ್ಷಗಳ ಲೆಕ್ಕ ತಪಾಸಣೆ ಬಾಕಿಯಿರುವುದು	22
5) 5 ವರ್ಷಗಳ ಲೆಕ್ಕ ತಪಾಸಣೆ ಬಾಕಿಯಿರುವುದು	22
6) 6 ವರ್ಷಗಳ ಲೆಕ್ಕ ತಪಾಸಣೆ ಬಾಕಿಯಿರುವುದು	76
ಒಟ್ಟು	**231**

ಹಾಲಿ 2 ಲೆಕ್ಕ ಪರಿಶೋಧನಾ ತಂಡಗಳಿದ್ದು, ನಿವೃತ್ತಿ ಪ್ರಕರಣಗಳಲ್ಲಿ ಆಧ್ಯತೆ ಮೇಲೆ ಕೈಗೊಂಡು ಇತರೆ ತೋಟಗಾರಿಕೆ ಕ್ಷೇತ್ರಗಳ : ನರ್ಸರಿಗಳ ಲೆಕ್ಕ ತಪಾಸಣೆಯನ್ನು ನಡೆಸಲಾಗುತ್ತಿದೆ. ಬಾಕಿಯಿರುವ ತೋಟಗಾರಿಕೆ ಕ್ಷೇತ್ರಗಳ : ನರ್ಸರಿಗಳ ಲೆಕ್ಕ ತಪಾಸಣೆಯನ್ನು ಹೆಚ್ಚು ಲೆಕ್ಕ ಪರಿಶೋಧನಾ ತಂಡಗಳನ್ನು ರೂಪಿಸಿಕೊಂಡು ಆಧ್ಯತೆ ಮೇಲೆ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ - 1

ಜಿಲ್ಲಾವಾರು ತೋಟಗಾರಿಕೆ ಕ್ಷೇತ್ರ : ಸಸ್ಯಾಗಾರಗಳ ವಿವರ

ಕ್ರ.ಸಂ.	ಜಿಲ್ಲೆ	ಕ್ಷೇತ್ರ :ಸಸ್ಯಾಗಾರಗಳ ಸಂಖ್ಯೆ
1.	ಬೆಂಗಳೂರು (ನಗರ)	7
2.	ಬೆಂಗಳೂರು (ಗ್ರಾಮಾಂತರ)	16
3.	ಕೋಲಾರ	31
4.	ತುಮಕೂರು	20
5.	ಚಿತ್ರದುರ್ಗ (ದಾವಣಗೆರೆ ಸೇರಿ)	21
6.	ಶಿವಮೊಗ್ಗ	15
7.	ಮೈಸೂರು (ಚಾಮರಾಜನಗರ ಸೇರಿ)	34
8.	ಮಂಡ್ಯ	18
9.	ಹಾಸನ	16
10.	ಕೊಡಗು	13
11.	ದಕ್ಷಿಣ ಕನ್ನಡ (ಉಡುಪಿ ಸೇರಿ)	23
12.	ಚಿಕ್ಕಮಗಳೂರು	14
13.	ಬೆಳಗಾವಿ	20
14.	ಧಾರವಾಡ (ಹಾವೇರಿ :ಗದಗ ಸೇರಿ)	32
15.	ಉತ್ತರ ಕನ್ನಡ	15
16.	ಬಿಜಾಪುರ (ಬಾಗಲಕೋಟೆ ಸೇರಿ)	17
17.	ಗುಲ್ಬರ್ಗಾ	17
18.	ರಾಯಚೂರು (ಕೊಪ್ಪಳ ಸೇರಿ)	25
19.	ಬೀದರ್	13
20.	ಬಳ್ಳಾರಿ	21
	ಒಟ್ಟು	**397**

ಅನುಬಂಧ - 1999-2000 ನೇ ಸಾಲಿನಲ್ಲಿ ತೋಟಗಾರಿಕೆ ಕ್ಷೇತ್ರ : ನರ್ಸರಿಗಳ ಪಾಲನೆ ಮತ್ತು ಅಭಿವೃದ್ಧಿಗೆ ನಿಗಧಿಪಡಿಸಿದ ಆಯವ್ಯಯ

ಕ್ರ.ಸಂ.	ಯೋಜನೆ	ಮೊಬಲಗು (ಲಕ್ಷ ರೂ.ಗಳಲ್ಲಿ)
	(1) ರಾಜ್ಯವಲಯ ಕ್ಷೇತ್ರಗಳು	
1.	ಯೋಜನೇತರ-ಇತರೆ ವೆಚ್ಚ ಕಾಮಗಾರಿ	141.10
2.	ಎಸ್-28 ಅಭಿವೃದ್ಧಿಯಾಗಿಲ್ಲದ ಕ್ಷೇತ್ರಗಳ ಅಭಿವೃದ್ಧಿ ಯೋಜನೆ	40.00
	(2) ಜಿಲ್ಲಾ ಪಂಚಾಯತ್ ಕ್ಷೇತ್ರಗಳು	
1.	ಡಿ-05 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	32.95
2.	ಡಿ-06 ತೋಟಗಾರಿಕೆ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ	53.93

ಕಂದಾಯ ಇಲಾಖೆಯಲ್ಲಿ ಗಣಕೀಕರಣ

567 - ಶ್ರೀ ಸಭಾಪತಿ. ಯು.ಆರ್. (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದೆಯವಿಟ್ಟು ಉತ್ತರಿಸುವರೆ

ಅ) ಕಂದಾಯ ಇಲಾಖಾ ಮಂತ್ರಿಗಳ ಕಛೇರಿ ಹಾಗೂ ಇಲಾಖಾ ಕಾರ್ಯದರ್ಶಿಗಳ ಕಛೇರಿಯನ್ನು ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಯಾವ ಕಾರ್ಯಕ್ರಮ ಕೈಗೊಳ್ಳಲಾಗಿದೆ? ಈ ಕಛೇರಿಗಳಿಗೆ 'ಇ-ಮೇಲ್' ವ್ಯವಸ್ಥೆ ಮಾಡಲಾಗಿದೆಯೇ? (ವಿವರ ನೀಡುವುದು)

ಆ) ರಾಜ್ಯದ ಎಷ್ಟು ಜಿಲ್ಲಾಧಿಕಾರಿಗಳ ಕಛೇರಿಯನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಿಸಲಾಗಿದೆ? ಹಾಗೂ ಇ-ಮೇಲ್ ವ್ಯವಸ್ಥೆ ಮಾಡಲಾಗಿದೆ? ವಿವರ ನೀಡುವುದು (ವಿಳಾಸ ಸಹಿತ)

ಇ) ಸಂಪೂರ್ಣವಾಗಿ ಕಂಪ್ಯೂಟರೀಕರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ಕಛೇರಿಗಳಲ್ಲಿ ಅವಶ್ಯವಿರುವ ಸಾಫ್ಟ್‌ವೇರ್‌ಗಳೊಂದಿಗೆ ಕಂಪ್ಯೂಟರ್‌ಗಳನ್ನು ನೀಡಲಾಗಿದ್ದು, ಕಂಪ್ಯೂಟರ್‌ಗಳ ಮೇಲೆ ಕೆಲಸ ಮಾಡಲು ಎಲ್ಲ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಇ-ಮೇಲ್ ಸೌಲಭ್ಯ ಹೊಂದಿರುವ ಲೋಟಸ್ ನೋಟ್ಸ್ ಸಾಫ್ಟ್‌ವೇರ್ ಅನ್ನು ಈ ಕಂಪ್ಯೂಟರ್‌ಗಳಲ್ಲಿ ಅಳವಡಿಸಲಾಗಿದೆ. ಎನ್.ಐ.ಸಿ. ಸಂಸ್ಥೆಯವರು ತಯಾರಿಸಿದ ಎಲ್‌ಎ : ಎಲ್‌ಸಿ ಸಾಫ್ಟ್ ವೇರ್ ಉಪಯೋಗಿಸಿ ಕಂಪ್ಯೂಟರ್ ಮೂಲಕ ಎಲ್ಲ ವಿಧಾನಸಭೆ :

ವಿಧಾನ ಪರಿಷತ್ತಿನ ಪ್ರಶ್ನೆಗಳು ಇಲಾಖೆಯಲ್ಲಿ ಪರಿಶೀಲಿಸಲ್ಪಟ್ಟು ಕಂದಾಯ ಸಚಿವರಿಂದ ಅನುಮೋದಿಸಲ್ಪಡುತ್ತಿವೆ.

ಆ) ರಾಜ್ಯದ ಎಲ್ಲ 27 ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ಕಂಪ್ಯೂಟರ್ ನೀಡಲಾಗಿದ್ದು, ಇವು 'ಇ-ಮೇಲ್' ಸೌಲಭ್ಯ ಹೊಂದಿರುತ್ತವೆ. ಎಲ್ಲಾ ಜಿಲ್ಲಾಧಿಕಾರಿಗಳ ಸಿಬ್ಬಂದಿಯನ್ನು ತರಬೇತಿಗೊಳಿಸಲಾಗುತ್ತಿದೆ.

ಇ) ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅವಶ್ಯವಿರುವ ಸಾಫ್ಟ್‌ವೇರ್ ಒಳಗೊಂಡ ಕಂಪ್ಯೂಟರ್‌ಗಳನ್ನು ಪೂರೈಸಲಾಗಿದೆ. ಸಿಬ್ಬಂದಿಯನ್ನು ಸ್ಥಳೀಯವಾಗಿ ತರಬೇತುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕಛೇರಿಗಳಿಗೆ ಅವಶ್ಯವಿರುವ ಸಾಫ್ಟ್‌ವೇರ್‌ನ್ನು ಎನ್.ಡಿ.ಸಿ. ಸಂಸ್ಥೆಯ ಸಹಾಯದಿಂದ ತಯಾರಿಸಲಾಗುತ್ತಿದೆ.

ಅನುಬಂಧ

E-mail addresess of Deputy Commissioners

Sl.No.	Name	e-mail address
1	Deputy Commissioner, Bidar	dcbidar@blr.vsnl.net.in
2	Deputy Commissioner, Belgaum	dcbgm@blr.vsnl.net.in
3	Deputy Commissioner, Bellary	dcblry@blr.vsnl.net.in
4	Deputy Commissioner, Shimoga	dcshmg@blr.vsln.net.in
5	Deputy commissioner, Bijapur	dcbija@blr.vsnl.net.in
6	Deputy Commissioner, Davanagere	dcdgere@blr.vsln.net.in
7	Deputy Commissioner, Bagalkot	dcbkot@blr.vsnl,net.in
8	Deputy Commissioner, Chitradurga	dcctdrg@blr.vsnl.net.in
9	Deputy Commissioner, Dakshina Kannada	dcdk@blr.vsnl.net.in
10	Deputy Commissioner, Udupi	dcudupi@blr.vsnl.net.in
11	Deputy Commissioner, Chikmagalore	dcckmlr@blr.vsnl.net.in
12	Deputy Commissioner, Dharwad	dcdwad@blr.vsnl.net.in
13	Deputy Commissioner, Gadag	dcgadag@blr.vsnl.net.in

Sl.No.	Name	e-mail address
14	Deputy Commissioner, Haveri	dchavr@blr.vsnl.net.in
15	Deputy Commisioner, Gulbarga	dcgulb@blr.vsnl.net.in
16	Deputy Commissioner, Hassan	dchasn@blr.vsnl.net.in
17	Deputy Commissioner, Kodagu	dckodgu@blr.vsnl.net.in
18	Deputy Commissioner, Kolar	dckolar@blr.vsln.net.in
19	Deputy Commissioner, Koppal	dckopl@blr.vsnl.net.in
20	Deputy Commissioner, Raichur	dcrchur@blr.vsnl.net.in
21	Deputy Commissioner, Mandya	dcmndya@blr.vsnl.net.in
22	Deputy Commissioner, Tumkur	dctumkr@blr.vsnl.net.in
23	Deputy Commissioner, Uttara Kannada	dcuk@blr.vsnl.net.in
24	Deputy Commissioner, Mysore	dcmys@bgl.vsnl.net.in
25	Deputy Commissioner, Chamrajnagar	dccnagr@bgl.vsnl.net.in
26	Deputy Commissioner, Bangalore Rural	dcbr@bgl.vsnl.net.in
27	Deputy Commissioner, Bangalore	dcbu@bgl.vsnl.net.in

ಬಡವರಿಗೆ ಮನೆಗಳ ನಿರ್ಮಾಣ

568 - ಶ್ರೀ. ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000 ನೇ ಸಾಲಿನಲ್ಲಿ ರಾಜ್ಯದಲ್ಲಿ ಆಶ್ರಯ, ಇಂದಿರಾ ಅವಾಜ್ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಯೋಜನೆಗಳಡಿಯಲ್ಲಿ ಬಡವರಿಗೆ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಇದಕ್ಕಾಗಿ ಖರ್ಚಾಗಿರುವ ಹಣ ಎಷ್ಟು?

ಇ) ಈ ವರ್ಷದಲ್ಲಿ ಬಡವರಿಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ? (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ)	ಆಶ್ರಯ ಯೋಜನೆಯಡಿಯಲ್ಲಿ	48738
	ಇಂದಿರಾ ಅವಾಜ್ ಯೋಜನೆಯಡಿಯಲ್ಲಿ	29132
	ಅಂಬೇಡ್ಕರ್ ಯೋಜನೆಯಡಿಯಲ್ಲಿ ನಿರ್ಮಿಸಿದ ಮನೆಗಳ	16950
	ಒಟ್ಟು ಸಂಖ್ಯೆ	**94820**

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ, ನೀಡಿದೆ)

ಆ)	ಅಶ್ರಯ ಯೋಜನೆಯಡಿಯಲ್ಲಿ ಸರ್ಕಾರದ ಸಹಾಯಧನ	3277.25
	ಇಂದಿರಾ ಅವಾಜ್ ಯೋಜನೆಯಡಿಯಲ್ಲಿ ಸರ್ಕಾರದ ಸಹಾಯಧನ	4190.33
	ಅಂಬೇಡ್ಕರ್ ಯೋಜನೆ ಯಡಿಯಲ್ಲಿ ಸರ್ಕಾರದ ಸಹಾಯಧನ	3202.27
	ಖರ್ಚಾಗಿರುವ ಒಟ್ಟು ಹಣ	**10669.85 ಲಕ್ಷಗಳು**

ಇ)	ನಗರ ಪ್ರದೇಶಕ್ಕೆ ವಿತರಿಸಲಾದ ನಿವೇಶನಗಳು	4070
	ಗ್ರಾಮಾಂತರ ಪ್ರದೇಶಕ್ಕೆ ವಿತರಿಸಲಾದ ನಿವೇಶನಗಳು	28625
	ಒಟ್ಟು	**32695**

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ)

ANNEXURE TO L.A. QUESTION NO. 666

SL. NO.	DISTRICT	ASHRAYA HOUSES	AMBEDKAR HOUSES	I.A.Y. HOUSES	HOUSES GRAND TOTAL	ASHRYA SITES RURAL	URBAN	TOTAL
1	2	3	4	5	6	7	8	9
1	BANGALORE (R)	2571	1003	1502	5076	4336	680	5016
2	BANGALORE (U)	1156	861	694	2711	995	0	995
3	CHITRADURGA	2323	619	2149	5091	544	918	1462
4	DAVANAGERE	1108	825	849	2782	140	397	537
5	KOLAR	1642	1132	3103	5877	171	0	171
6	TUMKUR	3063	1598	2121	6782	3264	0	3264
7	SHIMOGA	2435	590	721	3746	1538	0	1538
8	MYSORE	2294	1206	1430	4930	2239	824	3063
9	CHAMARAJNAGAR	933	762	1198	2893	1348	0	1348
10	CHIKMAGALUR	1742	354	458	2554	273	35	308
11	D. KANNADA	1460	712	616	2788	15	6	21
12	UDUPI	770	676	199	1648	720	19	739

1	2	3	4	5	6	7	8	9
13	HASSAN	4567	1060	842	6469	266	154	420
14	KODAGU	492	205	600	1297	1976	357	2333
15	MANDYA	2214	497	788	3499	5566	300	5866
16	BELGAUM	2441	932	2137	5510	0	0	0
17	BIJAPUR	2685	382	690	3757	1215	208	1423
18	BAGALKOT	1001	363	503	1867	0	34	34
19	DHARWAD	1236	185	228	1649	70	0	70
20	GADAG	1019	204	305	1528	657	0	657
21	HAVERI	1424	489	852	2765	100	0	100
22	U. KANNADA	1856	256	552	2664	1073	0	1073
23	GULBARGA	1539	499	1972	4010	83	138	221
24	BIDAR	1239	435	935	2609	543	0	543
25	BELLARY	1893	478	1264	3635	172	0	172
26	RAICHUR	1564	416	1296	3276	1321	0	1321
27	KOPPAL	2071	208	1128	3407	0	0	0
	Total	**48738**	**16950**	**29132**	**94820**	**28625**	**4070**	**32695**

ಅತಿ ವೃಷ್ಟಿಯಿಂದಾಗಿರುವ ಹಾಸಿಗೆ ಪರಿಹಾರ

569 - ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿನಲ್ಲಿ ಅತೀವೃಷ್ಟಿಯಿಂದ ರಾಜ್ಯದಲ್ಲಿ ಆಗಿರುವ ಹಾನಿ ಎಷ್ಟು?

ಆ) ಇದಕ್ಕಾಗಿ ರಾಜ್ಯ ಸರ್ಕಾರ ಬಿಡುಗಡೆಗೊಳಿಸಿದ ಹಣ ಎಷ್ಟು?

ಇ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪರಿಹಾರಕ್ಕಾಗಿ ಕೋರಿದ ಮೊತ್ತ ಎಷ್ಟು?

ಈ) ಕೇಂದ್ರ ಸರ್ಕಾರದಿಂದ ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರೂ 13219.83 ಲಕ್ಷಗಳು

ಆ) ರೂ 9131.32 ಲಕ್ಷಗಳು

ಇ) ರೂ 46159.00 (ಬರ ಪರಿಸ್ಥಿತಿ ಹಾಗೂ ಅತಿವೃಷ್ಟಿ ಹಾನಿ ಬಾಬ್ತು)

ಈ) ಕೇಂದ್ರ ಸರ್ಕಾರದಿಂದ ಈ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಅನುದಾನ ರೂ. 3629.00 ಲಕ್ಷಗಳು ಮಾತ್ರ ಬಿಡುಗಡೆಯಾಗಿದೆ. ಹೆಚ್ಚುವರಿ ಕೋರಿದ ಹಣ ಇದುವರೆಗೆ ಬಂದಿರುವುದಿಲ್ಲ.

ಆಲಮಟ್ಟಿ ಜಲಾಶಯದಡಿ ವಸತಿ ಸಾಕರ್ಯ

570 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ 521 ಮೀ ಕೆಳಗಡೆಯಲ್ಲಿ ಮುಳುಗಡೆ ಹೊಂದಿರುವ ಬಾಗಲಕೋಟೆ ಶಹರದ ಜನರಿಗಾಗಿ ನವನಗರದಲ್ಲಿ ಹಂಚಲಾದ ನಿವೇಶನಗಳಲ್ಲಿ ವ್ಯಾಪಾರ ವಹಿವಾಟಿಲ್ಲದ ಕಾರಣಕ್ಕಾಗಿ, ಆ ಜನ ಅಲ್ಲಿ ಮನೆ ನಿರ್ಮಾಣಕ್ಕೆ ಆಸಕ್ತಿ ತೋರುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯಾ?

ಆ) ಹಾಗಿದ್ದಲ್ಲಿ ಸರ್ಕಾರ ವ್ಯಾಪಾರ ವಹಿವಾಟು ಉತ್ತೇಜಿಸಲು ಇದರಿಂದ ನವನಗರದ ಸರ್ವತೋಮುಖ ಅಭಿವೃದ್ಧಿ ಮಾಡುವ ದಿಶೆಯಲ್ಲಿ ಹಾಕಿಕೊಂಡ ಕಾರ್ಯಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬಾಗಲಕೋಟೆ ನವನಗರದಲ್ಲಿ ಹಂಚಲಾದ ನಿವೇಶನಗಳಲ್ಲಿ ವ್ಯಾಪಾರ ಮಾಡುವುದಕ್ಕಾಗಿ ಅವಕಾಶ ಮಾಡಲಾಗಿದೆ.

ಆ) ಅಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ 521 ಮೀ ಕೆಳಗಡೆಯಲ್ಲಿ ಮುಳುಗಡೆ ಹೊಂದಲಿರುವ ಬಾಗಲಕೋಟೆ ಶಹರದ ಜನರಿಗಾಗಿ ನವನಗರದಲ್ಲಿ ಈಗಾಗಲೇ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಸುಮಾರು 296 ಸಂತ್ರಸ್ಥರು ತಮ್ಮ ಮನೆಗಳನ್ನು ಕಟ್ಟಿಕೊಂಡು ನಿವಾಸ ಮಾಡತೊಡಗಿದ್ದಾರೆ. ಆದಾಗ್ಯೂ ಪ್ರಾಧಿಕಾರವು ಅಲ್ಲಿ ವ್ಯಾಪಾರ ವಹಿವಾಟನ್ನು ಉತ್ತೇಜಿಸಲು ಈಗಾಗಲೇ 70 ಅಂಗಡಿ ಮಳಿಗೆಗಳುಳ್ಳ ಕಟ್ಟಡ, 3 ಶಾಪ್‌ಹೌಸ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಇನ್ನೊಂದು 70 ಅಂಗಡಿ ಮಳಿಗೆಗಳುಳ್ಳ ಕಟ್ಟಡ ಹಾಗೂ 42 ಅಂಗಡಿ ಮಳಿಗೆಗಳ ಕಟ್ಟಡ ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ. ಪ್ರತಿ ವಸತಿ ಸೆಕ್ಟರುಗಳಲ್ಲಿ ಎರಡು ಸಿ ಮಾದರಿಯ ನಿವೇಶನಗಳನ್ನು ಅಂಗಡಿ ಮಳಿಗೆಗೆ ಕಾಯ್ದಿರಿಸಲಾಗಿದೆ. ಸೆಕ್ಟರ್ 19 ರಲ್ಲಿ ಪ್ರಾಧಿಕಾರದಿಂದಲೇ ಸೂಪರ್ ಮಾರ್ಕೆಟ್ ಕಟ್ಟಿಸಲು ಯೋಜಿಸಿದೆ. ಸೆಕ್ಟರ್ ನಂ.17 ಹಾಗೂ 31ರಲ್ಲಿ ವ್ಯಾಪಾರಸ್ಥರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಿದೆ.

ಕೈಗಾರಿಕೆಯ ಅಭಿವೃದ್ಧಿಗಾಗಿ 400 ಎಕರೆ ಕ್ಷೇತ್ರವನ್ನು ಸಹ ನವನಗರದಲ್ಲಿ ಆಯ್ಕೆ ಮಾಡಿ ಇದರಲ್ಲಿ 100 ಎಕರೆ ಕ್ಷೇತ್ರವನ್ನು ಪ್ರಾಧಿಕಾರದಿಂದ ಕೆ.ಎ.ಐ.ಡಿ.ಎ. ಇವರಿಗೆ ಹಸ್ತಾಂತರಿಸಲಾಗಿದೆ.

ಅಂಕೋಲ ತಾಲ್ಲೂಕಿನ ಕೃಷಿಮಾರುಕಟ್ಟೆಯ ಕೆಲಸದ ಪ್ರಗತಿ

571 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಕೃಷಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99, 1999-2000ಕ್ಕೆ ರಾಜ್ಯದಲ್ಲಿ ಎಲ್ಲೆಲ್ಲಿ ಹೊಸ ಮಾರುಕಟ್ಟೆಗಳನ್ನು ನಿರ್ಮಿಸಲಾಗಿದೆ?

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಹೊಸ ಮಾರುಕಟ್ಟೆ ಸ್ಥಾಪನೆ ಯಾವ ಹಂತದಲ್ಲಿದೆ?

ಇ) ಇದು ಇನ್ನೂ ಪ್ರಾರಂಭವಾಗದೇ ನಿಧಾನಗತಿಯಲ್ಲಿರುವುದಕ್ಕೆ ಕಾರಣವೇನು?

ಈ) ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 1998-99 ಮತ್ತು 1999-2000ನೇ ಸಾಲಿನಲ್ಲಿ ಈ ಕೆಳಗಿನ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಿ ಘೋಷಣೆ ಮಾಡಲಾಗಿದೆ.

1998-99	*1999-2000*
1) ಕಿಕ್ಕೇರಿ [ಕೃಷ್ಣರಾಜಪೇಟೆ ಸಮಿತಿಯ ಉಪ ಮಾರುಕಟ್ಟೆ]	1) ಗೌರಿಬಿದನೂರು ಮುಖ್ಯ ಮಾರುಕಟ್ಟೆ

2) ಸಂತೆಬಾಚಹಳ್ಳಿ
[ಕೃಷ್ಣರಾಜಪೇಟೆ ಸಮಿತಿಯ
ಉಪ ಮಾರುಕಟ್ಟೆ]

2) ಬಿಂಡಿಗೆನವಿರೆ
ನಾಗಮಂಗಲ ಸಮಿತಿಯ ಉಪ
ಮಾರುಕಟ್ಟೆ

3) ಪಾಂಡವಪುರ
[ನಾಗಮಂಗಲ ಸಮಿತಿಯ
ಉಪ ಮಾರುಕಟ್ಟೆ]

4) ಮಳವಳ್ಳಿ
[ಮದ್ದೂರು ಸಮಿತಿಯ ಉಪ
ಮಾರುಕಟ್ಟೆ]

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ 1960ರ ಉಪ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆ. ಅಂಕೋಲಾ ತಾಲ್ಲೂಕಿಗೆ ಪ್ರತ್ಯೇಕ ಹೊಸ ಮಾರುಕಟ್ಟೆ ಸಮಿತಿಯನ್ನು ಸ್ಥಾಪಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಅಂಕೋಲ ಉಪ ಮಾರುಕಟ್ಟೆ ಪ್ರಾಂಗಣ ಅಭಿವೃದ್ಧಿಗಾಗಿ 10.15 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂ ಮಾಲೀಕರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದು ಮಾನ್ಯ ನ್ಯಾಯಾಲಯವು ಭೂಮಾಲೀಕರ ಪರವಾಗಿ ತೀರ್ಪು ನೀಡಿರುತ್ತದೆ. ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಅಂಕೋಲಾ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ.

ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಅಂಕೋಲಾ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಿ, ಪ್ರಾರಂಭಿಸಲು ವಿಳಂಬವಾಗಿರುತ್ತದೆ.

ಈ) ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಲಾಗಿದೆ. ನ್ಯಾಯಾಲಯವು ನೀಡುವ ಆದೇಶದ ಮೇರೆಗೆ ಕೂಡಲೇ ಮುಂದಿನ ಕ್ರಮ ಜರುಗಿಸಲಾಗುವುದು.

ಕೊಡಸಳ್ಳಿ ಪುನರ್ವಸತಿ ಪ್ರದೇಶ

572 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಸನ್ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1 ಯಲ್ಲಾಪುರ ತಾಲ್ಲೂಕಿನ ಕಾಳಿ ಯೋಜನೆಯಡಿ ನಿರಾಶ್ರಿತರಾದ ಜನರಿಗೆ ಸರಕಾರ ಯಾವ ಯಾವ ಸೌಲಭ್ಯ ನೀಡಿದೆ?

2 ಪುನರ್ವಸತಿ ಪ್ರದೇಶದಲ್ಲಿ ಎಷ್ಟು ನಿರಾಶ್ರಿತರಿಗೆ ಜಮೀನು ಮತ್ತು ಮನೆ ನೀಡಲಾಗಿದೆ? ನೀಡಿದ ಪರಿಹಾರವೆಷ್ಟು (ವಿವರ ಒದಗಿಸುವುದು)

3 ಪುನರ್ವಸತಿ ಪ್ರದೇಶದಲ್ಲಿ ಪ್ರಾಥಮಿಕ ಅಗತ್ಯತೆ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ (ವಿವರ ಒದಗಿಸುವುದು)

4 ಪುನರ್ವಸತಿ ಪ್ರದೇಶದಲ್ಲಿ ಪೂರ್ತಿ ಸೌಲಭ್ಯ ಯಾವಾಗ ಒದಗಿಸಲಾಗುವುದು?

ಶ್ರೀ. ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1 ಕಾಳಿ ಯೋಜನೆ ಹಂತ - II ರಡಿಯಲ್ಲಿನ ಕೊಡಸಳ್ಳಿ ಯೋಜನೆಯಿಂದ 9 ಹಳ್ಳಿಗಳು ಬಾಧಿತವಾಗಿದ್ದು ಹಾಗೂ 408 ಕುಟುಂಬಗಳು ಸಂತ್ರಸ್ತರಾಗಿರುತ್ತಾರೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಕಾರ್ಯದಡಿಯಲ್ಲಿ ಈ ಕೆಳಕಂಡ ವ್ಯವಸ್ಥೆ ಒದಗಿಸಿದೆ.

1. ಕಳೆದುಕೊಂಡ ಆಸ್ತಿಗೆ ಪರಿಹಾರ ಪಾವತಿ
2. ಪುನರ್ ವ್ಯವಸ್ಥೆಗಾಗಿ ಭೂಮಿಯ ಬದಲಿಗೆ ಭೂಮಿ ಹಂಚಿಕೆ
   ಅಥವಾ
   ಪುನರ್ ವ್ಯವಸ್ಥೆಗಾಗಿ ಪುನರ್ವಸತಿ ಅನುದಾನ ಪಾವತಿ
3. ಉಚಿತ ಮನೆ ನಿವೇಶನ
4. ಬಾಧಿತವಾದ ಪ್ರದೇಶದಿಂದ ಆಯ್ದು ಪುನರ್ರ್ ವ್ಯವಸ್ಥೆ ಸ್ಥಳಕ್ಕೆ ಸಾಮಾನು ಸರಂಜಾಮುಗಳನ್ನು ಸಾಗಿಸಲು ಉಚಿತ ವಾಹನ ಸೌಲಭ್ಯ.

5 ಬಾಧಿತ ಕುಟುಂಬದವರಿಂದ ಒಬ್ಬರಿಗೆ ಸ್ವಯಂ ಉದ್ಯೋಗವನ್ನು ಹೊಂದಲು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ತರಬೇತಿ

6 ಮುಳುಗಡೆ ಪ್ರದೇಶದ ಅಭ್ಯರ್ಥಿಗೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಉದ್ಯೋಗ ನೇಮಕಾತಿಯಲ್ಲಿ ಪ್ರಾಧಾನ್ಯತೆ ನೀಡಲಾಗುವುದು.

2 ಕೊಡಸಳ್ಳಿ ಯೋಜನೆಯಡಿಯಲ್ಲಿ 948 ಎಕರೆ ಖಾಸಗಿ ಭೂಮಿಯ ಹಾಗೂ ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಂಡು, 1852.25 ಲಕ್ಷ ರೂ.ಗಳ ಪರಿಹಾರವನ್ನು ನೀಡಲಾಗಿದೆ. ಇನ್ನೂ 15 ಕುಟುಂಬದವರಿಗೆ ಪರಿಹಾರ ಪಾವತಿಸಬೇಕಾದ ಕಾರ್ಯ ಪ್ರಗತಿಯಲ್ಲಿದೆ. 60 ಕುಟುಂಬದವರ ಕೋರಿಕೆಯಂತೆ, ಪುನರ್ವಸತಿ ಅನುದಾನವಾಗಿ 10.50 ಲಕ್ಷ ರೂ.ಗಳನ್ನು ಪಾವತಿಸಲಾಗಿದೆ. ಇನ್ನೂ 7 ಕುಟುಂಬದವರಿಗೆ ಪುನರ್ವಸತಿ ಅನುದಾನ ಪಾವತಿಸಬೇಕಾಗಿದೆ.

341 ಕುಟುಂಬದವರು ಭೂಮಿಯ ಬದಲಿಗೆ ಭೂಮಿ ನೀಡಲು ಇಚ್ಛಿಸಿರುತ್ತಾರೆ. ಈ ಉದ್ದೇಶಕ್ಕಾಗಿ ಅಂಕೋಲ ತಾಲ್ಲೂಕಿನ, ಹೆಗ್ಗಾರ್ (360 ಎಕರೆ) ಹಳವಳ್ಳಿ (282 ಎಕರೆ) ಮತ್ತು ಕಲ್ಲೇಶ್ವರ (402 ಎಕರೆ) ಎಂಬ ಸ್ಥಳಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಕರ್ನಾಟಕ ವಿದ್ಯುತ್ ನಿಗಮವು ಸ್ಥಾಪಿಸಿದೆ. ಈ ಕೇಂದ್ರದಲ್ಲಿ, ಕದ್ರಾ ಸಂತ್ರಸ್ತರಾದ 14 ಕುಟುಂಬದವರು ಸೇರಿ ಒಟ್ಟು 355 ಕುಟುಂಬದವರಿಗೆ ಭೂಮಿಯನ್ನು ಹಂಚಲಾಗಿದೆ.

ಕೃಷಿ ಭೂಮಿಯ ಹಂಚಿಕೆ ಪ್ರಮಾಣ

ಕ್ರಮ ಸಂಖ್ಯೆ	ವಿವರ	ಪ್ರಸ್ತಾಪಿಸಿದ ವಿ. ಪ್ರಮಾಣ
1.	2 ಎಕರೆವರೆಗೆ ಭೂಮಿ ಕಳೆದುಕೊಂಡ ಖಾತೆದಾರರಿಗೆ	1 20
2.	ಸದರ 2 ಎಕರೆಯಿಂದ 10 ಎಕರೆವರೆಗೆ	3 00
3.	ಸದರ 10 ಎಕರೆವರೆಗೆ	4 00
4.	ಭೂ ರಹಿತ ಕಾರ್ಮಿಕರು	1 00

ಹಂಚಲಾದ ಭೂಮಿಯಲ್ಲಿ ಮನೆ ನಿವೇಶನವೂ ಸೇರಿದೆ ಸಂತ್ರಸ್ತರಿಗೆ ಹಂಚಲಾದ ಭೂಮಿಯನ್ನು ಅಭಿವೃದ್ಧಿಗೊಳಿಸಲು, ಎಕರೆಗೆ 3000 ರೂ.ಗಳನ್ನು ನೀಡಲಾಗಿದೆ.

ಹಂಚಲಾದ ಕೃಷಿ ಭೂಮಿಗೆ ಏತ ನೀರವಾರಿ ಸೌಲಭ್ಯಕ್ಕಾಗಿ 10 ಅಶ್ವ ಶಕ್ತಿಯ 38 ನೀರೆತ್ತುವ ಯಂತ್ರವನ್ನು ಒದಗಿಸಲು 100 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಬಾಧಿತವಾದ ಪ್ರದೇಶದಿಂದ ಸಂತ್ರಸ್ತರು ಆಯ್ದು ಪುನರ್ವಸತಿ ಪ್ರದೇಶಕ್ಕೆ ಸಾಮಾನು ಸರಂಜಾಮುಗಳನ್ನು ಸಾಗಿಸಲು 9.50 ಲಕ್ಷ ರೂ.ಗಳನ್ನು ನೀಡಲಾಗಿದೆ. ಹಾಗೂ ಸಂತ್ರಸ್ತರಿಗೆ ಹಂಚಲಾದ ಭೂಮಿಯಲ್ಲಿ ಟೇರು, ಇತ್ಯಾದಿಗಳನ್ನು ತೆಗೆಯಲು 30.10 ಲಕ್ಷ ರೂ.ಗಳನ್ನು ನೀಡಲಾಗಿದೆ.

3 ಕರ್ನಾಟಕ ವಿದ್ಯುತ್ ನಿಗಮವು ಎಲ್ಲಾ ಮೂರು ಪುನರ್ವಸತಿ ಕೇಂದ್ರಗಳನ್ನು ತಲುಪಲು 15.5 ಕಿ.ಮೀ.ಉದ್ದದ ಡಾಂಬರೀಕರಣ ಹೊಂದಿದ ರಸ್ತೆಯನ್ನು 100 ಲಕ್ಷ ರೂ.ಗಳಿಂದ ಒದಗಿಸಲಾಗಿದೆ. ಪುನರ್ವಸತಿ ಕೇಂದ್ರದಲ್ಲಿನ ಒಳ ರಸ್ತೆಗಳಲ್ಲಿ ಅಡ್ಡ ಮೋರಿಗಳನ್ನು ಹೊಂದಿದ 17.00 ಕಿ.ಮೀ. ಉದ್ದದ ರಸ್ತೆಯನ್ನು 40.60 ಲಕ್ಷ ರೂ.ಗಳಿಂದ ಒದಗಿಸಲಾಗಿದೆ. 11 ಕೆ.ವಿ.ಎ ಸಾಮರ್ಥ್ಯದ ವಿದ್ಯುತ್ ಲೈನ್ ಒದಗಿಸಲಾಗಿದೆ, ಕುಡಿಯುವ ನೀರಿಗಾಗಿ 17 ತೆರದ ಬಾವಿಗೆ ಪಂಪ್‌ಸೆಟ್, ಅಳವಡಿಸಲಾಗಿದೆ. 37 ನೀರು ಸಂಗ್ರಹಣಾ ತೊಟ್ಟಿ ಹಾಗೂ 3 ಕೊಳವೆ ಬಾವಿಗಳನ್ನು ಒದಗಿಸಿದೆ. ಈ ಎಲ್ಲಾ ಸೌಲಭ್ಯಗಳನ್ನು ಒಟ್ಟು 30.00 ಲಕ್ಷ ರೂ.ಗಳಿಂದ ಒದಗಿಸಲಾಗಿದೆ.

ಪುನರ್ವಸತಿ ಕೇಂದ್ರದಲ್ಲಿ ಸಂತ್ರಸ್ತರ ಅನುಕೂಲಕ್ಕಾಗಿ ಈ ಕೆಳಗಿನ ಸಾರ್ವಜನಿಕ ಕಟ್ಟಡಗಳನ್ನು ಒದಗಿಸಲಾಗಿದೆ.

1. ಹೆಗ್ಗಾರ ಹಳವಳ್ಳಿ ಮತ್ತು ಕಲ್ಲೇಶ್ವರದಲ್ಲಿ - ಶಾಲೆ ಕಟ್ಟಡ
2. ಮೂರು ಪುನರ್ವಸತಿ ಕೇಂದ್ರಗಳಲ್ಲಿ - ದೇವಸ್ಥಾನ
3. ಪುನರ್ವಸತಿಯ ಕೇಂದ್ರ ಸ್ಥಳವಾದ ಕಲ್ಲೇಶ್ವರದಲ್ಲಿ ಪಂಚಾಯತಿ ಕಛೇರಿ ನಿರ್ಮಿಸಲಾಗಿದೆ.
4. ಮೂರು ಕೇಂದ್ರಗಳಲ್ಲಿ - ಯುವಕ ಮಂಡಲ ಕಟ್ಟಡ

5. ಕಲ್ಲೇಶ್ವರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ, ಆರಕ್ಷಕ ಠಾಣೆ, ಅಂಚೆ ಕಛೇರಿ ಕಟ್ಟಡಕ್ಕೆ ಹೊಂದಿಕೊಂಡಂತೆ ವಸತಿ ಗೃಹಗಳು

6. ಮೂರು ಕೇಂದ್ರಗಳಲ್ಲಿ - ಬಸ್ ನಿಲ್ದಾಣ

7. ಕಲ್ಲೇಶ್ವರದಲ್ಲಿ 'ಬಿ' ಮತ್ತು 'ಸಿ' ಮಾದರಿ ವಸತಿ ಗೃಹಗಳು

4 ಪುನರ್ವಸತಿ ಕೇಂದ್ರದಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಪ್ರಗತಿಯಲ್ಲಿದೆ.

1. ಒಳ ರಸ್ತೆಗಳಿಗೆ ಅಡ್ಡ ಮೋರಿ ಒದಗಿಸುವುದು

2. ಹೆಚ್ಚುವರಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕಾಥಗಾರಿ

3. ದೇವಸ್ಥಾನಗಳಿಗೆ ಕಾಂಪೌಂಡ್/ಬೇಲಿ ಒದಗಿಸುವುದು

4. ಹೆಗ್ಗಾರ ಕೇಂದ್ರದಲ್ಲಿ ಅಂಗನವಾಡಿ ಕಟ್ಟಡ

ಈ ಮೇಲಿನ ಎಲ್ಲಾ ಕಾಮಗಾರಿಗಳೂ ಜೂನ್ 2000 ವೇಳೆಗೆ ಪೂರ್ಣಗೊಳ್ಳಲಿವೆ.

ಅಂಗನವಾಡಿ ನೌಕರರ ಖಾಯಂ ನೇಮಕಾತಿ

574 - ಶ್ರೀ. ವಿಜಯಕುಮಾರ ಶೆಟ್ಟಿ (ಸುರತ್‌ಕಲ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ನೌಕರರ ಸಂಖ್ಯೆ ಎಷ್ಟು?

ಆ) ಇವರಿಗೆ ನೀಡುತ್ತಿರುವ ತಿಂಗಳ ವೇತನವೆಷ್ಟು?

ಇ) ಇವರನ್ನು ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು 39404 ಹಾಗೂ 39921 ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಅಂಗನವಾಡಿ ಕಾರ್ಯಕರ್ತೆಯರಿಗೆ ಕೆಳಕಂಡಂತೆ ಮಾಸಿಕ ಗೌರವ-ಧನ ನೀಡಲಾಗುತ್ತಿದೆ :

	ಭಾರತ ಸರ್ಕಾರ ರೂ.	*ರಾಜ್ಯ ಸರ್ಕಾರ ರೂ.*
1) ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ	500	250
2) ಎಸ್‌ಎಸ್‌ಎಲ್‌ಸಿ ಪಾಸಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	531	250

	ಭಾರತ ಸರ್ಕಾರ ರೂ.	ರಾಜ್ಯ ಸರ್ಕಾರ ರೂ.
3) ಎಸ್‌ಎಸ್‌ಎಲ್‌ಸಿ ಪಾಸಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	563	250
4) ಎಸ್.ಎಸ್.ಎಲ್‌ಸಿ ಫೇಲಾದವರೆಗೆ	438	250
5) ಎಸ್‌ಎಸ್‌ಎಲ್‌ಸಿ ಫೇಲಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	469	250
6) ಎಸ್‌ಎಸ್‌ಎಲ್‌ಸಿ ಫೇಲಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	500	250
7) ಸಹಾಯಕಿಯರಿಗೆ	260	125

ಇ) ಈ ವಿಷಯ ಕುರಿತು ಕರ್ನಾಟಕ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ 2841-45: 96ರ ವಿರುದ್ಧ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕಾಯಲಾಗುತ್ತಿದೆ.

ಸರ್ಕಾರಿ ಭೂಮಿಗಳಲ್ಲಿರುವವರಿಗೆ ಹಕ್ಕು ಪತ್ರ

575 - ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಭೂಮಿಗಳಲ್ಲಿ ವಾಸ ಮಾಡುತ್ತಿರುವ ಜನರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳು)

ಆ) ಈ ಜನರಿಗೆ ನಿವೇಶನದ ಹಕ್ಕು ಪತ್ರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) ;

ಅ) ಮಾಹಿತಿ ಸಂಗ್ರಹಿಸಲಾಗುತ್ತಿದೆ

ಆ) ಕರಡು ನಿಯಮವನ್ನು ದಿನಾಂಕ : 31-12-99 ರಂದು ಪ್ರಕಟಿಸಲಾಗಿದ್ದು ಸಲಹೆ:ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಸಲಹೆ: ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದ್ದು ಪರಿಶೀಲನೆಯಲ್ಲಿದೆ. ಅಂತಿಮ ಅಧಿಸೂಚನೆಯನ್ನು ಶೀಘ್ರವಾಗಿ ಹೊರಡಿಸಲಾಗುವುದು.

ವರದಿಗಳನ್ನೊಪ್ಪಿಸುವುದು

ಶ್ರೀ. ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) (ಸದಸ್ಯರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆ ವರದಿಯನ್ನು ಈ ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಒಪ್ಪಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರ್ಕಾರದ 1999ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ (ರಾಜ್ಯಸ್ವ ಸ್ವೀಕೃತ) (ಸಂಖ್ಯೆ 1) ಸಂಬಂಧಿಸಿದ ವರದಿಯನ್ನು ಈ ಸಭೆಯ ಮುಂದಿಡುತ್ತೇನೆ.

ಹಾಗೆಯೇ ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 1998-99ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಪ್ರಶ್ನೋತ್ತರದ ಉತ್ತರ ಪತ್ರಿಕೆಗಳಲ್ಲಿ ಸಂಬಂಧ ಪಟ್ಟ ಸಚಿವರ ಸಹಿ ಇಲ್ಲದಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಸದಸ್ಯರಾದ ಮಾನ್ಯ ರಾಮದಾಸ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ಪ್ರಶ್ನೆಗಳೇನಿರುತ್ತದೆ ಅದಕ್ಕೆ ಉತ್ತರವನ್ನು ಕೊಟ್ಟಿರುತ್ತಾರೆ ಆದರೆ ಸಚಿವರು ಅದಕ್ಕೆ ಸಹಿ ಮಾಡಿರುವುದಿಲ್ಲ. ಆದ್ದರಿಂದ ಉತ್ತರವನ್ನು ಕೊಡಬೇಕಾದರೆ ಅದರ ಗಂಭೀರತೆಯ ಬಗ್ಗೆ ಅಧ್ಯಯನ ಮಾಡಿ ಉತ್ತರ ಕೊಡುತ್ತಾರೋ ಇಲ್ಲವೋ ಎಂಬ ಪ್ರಶ್ನೆ ಬರುತ್ತದೆ. ನಮಗೆ ಉತ್ತರವನ್ನು ಕಳಿಸುತ್ತಾರೆ ಆದಕ್ಕೆ ಅವರ ಅಧೀನ ಕಾರ್ಯದರ್ಶಿಯವರು, ಇತರೆ ಅಧಿಕಾರಿಗಳು ಸಹಿ ಮಾಡಿರುತ್ತಾರೆ.

ಅಧ್ಯಕ್ಷರು : ಮುಖ್ಯ ಕಡತಕ್ಕೆ ಸಚಿವರು ಸಹಿ ಮಾಡಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಸದಸ್ಯರಿದ್ದಾಗ ಇದರ ಬಗ್ಗೆ ತಕರಾರು ಮಾಡಿದ್ದೀರಿ. ಅದರ ಬಗ್ಗೆ ಸ್ವಲ್ಪ ಈ ಸಭೆಯ ಗಮನಕ್ಕೆ ತರುತ್ತೇನೆ. 23.3.1990 ರಲ್ಲಿ ಇದು ಆಗಿರುವುದು. ಅದನ್ನು ಓದಿಬಿಡುತ್ತೇನೆ.

"When Hon'ble Member Sri M.V. Venkatappa raised an objection for affixing the signature of the Deputy Secretary or the Under Secretary on the replies to the questions, statements etc., being made by the Ministers on the floor of the House. the Chair rules:

"I entirely agree with the points raised by the Hon'ble Member Sri M.V. Venkatappa. They have absolutely no role to play in the deliberations of this House and the Ministers themselves will have to affix the signatures while furnishing answers to this august House. I notice laps. I am sure the necessary correctives will be effected."

ಅಧ್ಯಕ್ಷರು : ಇದರ ಬಗ್ಗೆ ನಾನು ಮತ್ತು ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ಕುಳಿತು ಮಾತನಾಡಿ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷರಾಗಿ ಕುಳಿತಿದ್ದಾಗ ಈ ರೀತಿ ರೂಲಿಂಗನ್ನು ಕೊಟ್ಟಿದ್ದಾರೆ. ಈಗ ತಮ್ಮ ರೂಲಿಂಗನ್ನು ಕೊಡಿ. ತಾವು ನನ್ನಂತೆ ಸದಸ್ಯರಾಗಿ ಕುಳಿತಿದ್ದಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದಾಗ ತಾವು ಈ ಪ್ರಶ್ನೆ ಕೇಳಿದ್ದೀರಿ. ಅದಕ್ಕೆ ಮುಖ್ಯಮಂತ್ರಿಯವರು ಅಧ್ಯಕ್ಷರ ಸ್ಥಾನದಲ್ಲಿ ಕುಳಿತು ಈ ರೀತಿ ರೂಲಿಂಗ್ ಕೊಟ್ಟಿದ್ದಾರೆ. ಇದಕ್ಕೆ ಸಂಭಂದಪಟ್ಟ ಹಾಗೆ ತಾವು ಏನು ಹೇಳುತ್ತೀರಿ?

SRI C. BYREGOWDA : It is a ruling given by the Chair. ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಇಲ್ಲಿ ನಡವಳಿಕೆ ನಡೆಯಬೇಕಾಗಿದ್ದರೆ it has to be considered by the Chair and again there should be a Ruling. What the Hon'ble Members are telling is that already there is a ruling and it has to be implemented. ನಮ್ಮ ಸರ್ಕಾರ ಇದ್ದಾಗ ಎಲ್ಲ ಉತ್ತರಗಳು ಮಂತ್ರಿಗಳ ಸಹಿಯೊಂದಿಗೆ ಬರುತ್ತಿದ್ದವು. ಸರ್ಕಾರಕ್ಕೆ ಆ ರೀತಿಯಾದ ನಿರ್ದೇಶನವನ್ನು ತಾವು ಕೊಟ್ಟರೆ ಆಯಿತು.

ಅಧ್ಯಕ್ಷರು : ಇದರ ಬಗ್ಗೆ ಎಗ್ಸಾಮಿನ್ ಮಾಡಿ ನಾನು ರೂಲಿಂಗ್ ಕೊಡುತ್ತೇನೆ.

ಬಿಜಾಪುರ್ ಜಿಲ್ಲೆಯ ಆಲಮಟ್ಟಿಯಲ್ಲಿ ನೆಡೆಯುತ್ತಿರುವ ಕರಸೇವೆ ಕಾರ್ಯ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು, ಸದನದಲ್ಲಿ ಇದ್ದಾರೆ. ಮೂರು ದಿವಸಗಳ ಹಿಂದೆ ಒಂದು ಮಹತ್ತರವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೆವು. ಸರ್ಕಾರವನ್ನು ನಡೆಸತಕ್ಕ ಆಡಳಿತಪಕ್ಷದ ಹಿತದೃಷ್ಟಿಯಿಂದ ಬೇರೆ ವಿಚಾರಗಳು ಇಲ್ಲಿ ಪ್ರಸ್ತಾಪವಾಗಿದ್ದರಿಂದ ನಾವು ನಾವು ಆ ವಿಚಾರವನ್ನು ಚರ್ಚೆ ಮಾಡಲು ಆಗಲಿಲ್ಲ. ಈ ತಿಂಗಳ 26ನೇ ತಾರೀಖು ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ನಡೆಯುತ್ತಿರುವ ಕರಸೇವೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ಸಚಿವರನ್ನು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಬಿಜಾಪುರಕ್ಕೆ ಕಳಿಸಿದ್ದರು. ಅವರು ಅಲ್ಲಿ ಧರಣಿ ಕುಳಿತಿರುವ ಜನರೊಂದಿಗೆ ಮಾತುಕತೆಯಾಡಿದ್ದಾರೆ

ಎಂದು ಪತ್ರಿಕೆಗಳ ಮೂಲಕ ನಾವು ಓದಿದ್ದೇವೆ. ಈ ವಿಚಾರದ ಬಗ್ಗೆ ಸರ್ಕಾರದ ನಿಲುವೇನು? ಏಕೆಂದರೆ ನಾಳೆ ರಾಜೆ ಇದೆ, ನಾಡಿದ್ದು ಕರಸೇವೆ ನಡೆಯುತ್ತದೆ. ಆಲಮಟ್ಟಿ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ, ಸರ್ಕಾರದ ನಿಲವು ಏನೆಂಬುದನ್ನು ತಿಳಿದುಕೊಂಡು ನಾವೆಲ್ಲರೂ ಸರ್ವಪಕ್ಷಗಳು ಒಟ್ಟಿಗೆ ಹೋಗಬೇಕು ಎಂಬುದಾಗಿದೆ. ಕೊನೆಯ ಪಕ್ಷ ಸರ್ಕಾರದವರು ನಮ್ಮನ್ನೆಲ್ಲಾ ಕರೆಸಿ ಈ ಕರಸೇವೆ ಮಾಡತಕ್ಕಂತಹ ವಿಚಾರದಲ್ಲಿ ಮಾತನಾಡಬಹುದಾಗಿತ್ತು. ಮಠಾಧೀಶರು ಇದರಲ್ಲಿ ಭಾಗವಹಿಸುತ್ತಿದ್ದಾರೆ. ರಾಜಕೀಯ ಪಕ್ಷಗಳು ಇದಕ್ಕೆ ತಮ್ಮ ಬೆಂಬಲವನ್ನು ವ್ಯಕ್ತ ಪಡಿಸಿವೆ. ಅದರ ಜೊತೆಗೆ ಅನೇಕ ಜನ ಪ್ರತಿನಿಧಿಗಳೂ ಕೂಡ ಇದರಲ್ಲಿ ಭಾಗವಹಿಸಲು ನಿರ್ಧಾರ ಮಾಡಿದ್ದಾರೆ. ಇದು ಯಾವುದೇ ರೀತಿಯಲ್ಲೂ ಸಹಿತ ಕರ್ನಾಟಕ ರಾಜ್ಯದ ಹಿತಾಸಕ್ತಿಗೆ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದಾಗಿ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಯಿತೇ ವಿನಃ ಬೇರೆ ಇನ್ನಾವ ದೃಷ್ಟಿಯಿಂದಲೂ ಅಲ್ಲ. ಸುಪ್ರೀಂಕೋರ್ಟ್ ಆಲಮಟ್ಟಿ ಕೇಸಿನ ತೀರ್ಪನ್ನು ಕಾಯ್ದಿಟ್ಟಿರುವ ಹಿನ್ನೆಲೆಯಲ್ಲಿ ನಾವೇನು ಮಾತನಾಡಬಹುದು ಎಂಬ ಬಗ್ಗೆ ಮಾನ್ಯ ಅಧ್ಯಕ್ಷರ ಕಛೇರಿಯಲ್ಲಿ ಕುಳಿತು ಚರ್ಚೆ ಮಾಡೋಣ ಎನ್ನತಕ್ಕಂತಹ ವಿಚಾರ ಕೂಡ ಬಂದಿತ್ತು. ಆದರೆ ಸಮಯದ ಅಭಾವದಿಂದ ತಮಗೆ ಆ ಕೆಲಸವನ್ನು ಮಾಡಲಿಕ್ಕೆ ಆಗಿಲ್ಲ ಎಂಬ ಅರಿವೂ ಕೂಡ ನಮಗೆ ಇದೆ. ಇವತ್ತು ಈ ವಾರದ ಅಧಿವೇಶನದ ಕೊನೆಯ ದಿನವಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಈ ವಿಷಯದಲ್ಲಿ ಏನು ಕೆಲಸವನ್ನು ಮಾಡಿದ್ದಾರೆ, ಯಾರ ಜೊತೆಗೆ ಮಾತುಕತೆ ಮಾಡಿದ್ದಾರೆ, ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬ ಬಗ್ಗೆ ದಯವಿಟ್ಟು ಈ ಸದನದ ಮೂಲಕ ರಾಜ್ಯಕ್ಕೆ ತಿಳಿಸಬೇಕೆಂದು ಕೋರುತ್ತೇನೆ. ಕರಸೇವೆ ಮಾಡತಕ್ಕ ಜನ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೆ ಎಂಬ ಅವರ ಭಾವನೆಗಳನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. 524 ಮೀಟರ್ ಎತ್ತರಕ್ಕೆ ಡ್ಯಾಂಮ್ ಅನ್ನು ನಿಲ್ಲಿಸಿ ನೀರನ್ನು ಸಂಗ್ರಹಿಸಿ ಉಪಯೋಗಿಸಿಕೊಳ್ಳಬೇಕೆಂಬ ಬೇಡಿಕೆಯನ್ನು ಸತತವಾಗಿ ಅಧಿಕಾರದಲ್ಲಿರುವ ಎಲ್ಲಾ ಸರ್ಕಾರಗಳೂ ಕೂಡ ಪ್ರತಿಪಾದಿಸುತ್ತಲೇ ಬಂದಿವೆ. ಈ ಹಿನ್ನೆಲೆಯಲ್ಲಿ ಕರಸೇವೆ ವಿಚಾರದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ದಯೆಮಾಡಿ ತಿಳಿಸಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ನಾಯಕರು ಮತ್ತು ಜನತಾದಳ (ಯು) ಶಾಸಕಾಂಗ ಪಕ್ಷದ ನಾಯಕರೂ ಆದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಬಹಳ ಗಂಭೀರವಾದ ವಿಷಯವನ್ನು ಇವತ್ತು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅಲಮಟ್ಟಿ ಅಣೆಕಟ್ಟಿನ ವಿಷಯದ ಬಗ್ಗೆ ಬಿಜಾಪುರದಲ್ಲಿ ಕಳೆದ ಕೆಲವು ದಿವಸಗಳಿಂದ ಹೋರಾಟ ನಡೆಯುತ್ತಿದೆ. ಅಲಮಟ್ಟಿ ವಿಷಯದಲ್ಲಿ ಕರ್ನಾಟಕ ರಾಜ್ಯದ ಆ ಭಾಗದ ರೈತರಿಗೆ ಅನ್ಯಾಯವಾಗಬಾರದು, ಇದರ ಬಗ್ಗೆ ಸರಿಯಾದ ದಿಕ್ಕಿನಲ್ಲಿ ಸರ್ಕಾರದಿಂದ ನಿರ್ಣಯಗಳು ಆಗಬೇಕು ಎಂಬ ಬಗ್ಗೆ ಸರ್ಕಾರದ ಮೇಲೆ ಒತ್ತಡ ತರುವ ದೃಷ್ಟಿಯಿಂದ ಈ ರೀತಿಯ ಕರಸೇವೆಯಂತಹ ಹೋರಾಟವನ್ನು ಅವರು ಮಾಡುತ್ತಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಆಲಮಟ್ಟಿಗೆ ಸಂಬಂಧಪಟ್ಟ ಪ್ರಕರಣ ಸುಪ್ರೀಂ

ಕೋರ್ಟ್‌ನ ಮುಂದಿದೆ. ಈ ಪ್ರಕರಣದಲ್ಲಿ ವಾದ ವಿವಾದಗಳು ನಡೆದು ಸುಪ್ರೀಂ ಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ. ಈ ಸಂದರ್ಭದಲ್ಲಿ 26ನೇ ತಾರೀಖು ಆಲಮಟ್ಟಿಯಲ್ಲಿ ಮಠಾಧೀಶರುಗಳು, ಜನ ನಾಯಕರುಗಳು, ರಾಜಕೀಯ ಮುಖಂಡರುಗಳು ನಾಗರೀಕರು, ರೈತರು ಕರಸೇವೆ ಮಾಡಲು ಹೊರಟಿದ್ದಾರೆ. ಆ ಸಂದರ್ಭದಲ್ಲಿ ಜನರು ಎಮೋಷನಲ್ಲಾಗಿ ವರ್ತಿಸಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯಬಾರದು ಎಂಬುದು ನಮ್ಮೆಲ್ಲರ ಕಳಕಳಿಯಾಗಿದೆ. ಆಲಮಟ್ಟಿ ಡ್ಯಾಮ್ ಅನ್ನು 524 ಮೀಟರ್ ಎತ್ತರಕ್ಕೆ ಏರಿಸುವ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳ ಸಹಮತ ಇದೆ. ಅಲ್ಲಿರುವ ಹೋರಾಟಗಾರರಿಗೆ ನಾವು ಇವತ್ತು ಈ ಸಂದೇಶವನ್ನು ಕನ್‌ವೀನ್ ಮಾಡಬೇಕಾಗಿದೆ. ಬಹುಶಃ ನಿನ್ನೆ ಮಾನ್ಯ ನೀರಾವರಿ ಸಚಿವರಾದಂತಹ ಹೆಚ್.ಕೆ.ಪಾಟೀಲ್‌ರವರು ಬಿಜಾಪುರಕ್ಕೆ ಹೋಗಿ ಅಲ್ಲಿ ಈ ವಿಷಯದ ಬಗ್ಗೆ ವಿಚಾರ ಮಂಥನ ನಡೆಸಿರಬಹುದು. ಈ ಕರಸೇವೆ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಸುಪ್ರೀಂ ಕೋರ್ಟ ತೀರ್ಪು ಬರುವಂತಹ ಸಂದರ್ಭದಲ್ಲಿ ಸರಿಯಾದ ದಿಕ್ಕಿನಲ್ಲಿ ನಾವು ಹೋಗುವ ರೀತಿಯಲ್ಲಿ ಮತ್ತು ಅಲ್ಲಿಯ ಹೋರಾಟಗಾರರಿಗೆ ಶಾಂತ ರೀತಿಯ ವಾತಾವರಣ ನಿರ್ಮಾಣ ಮಾಡಲಿಕ್ಕೆ ಸಹಾಯವಾಗುವ ರೀತಿಯಲ್ಲಿ ಸರ್ಕಾರದ ನಿಲುವನ್ನು ಸದರಿ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಕಟಿಸಬೇಕೆಂದು ನಾನು ಕೋರುತ್ತೇನೆ. ಕರಸೇವೆ ಹೋರಾಟದ ಬಗ್ಗೆ ನಮಗೆ ಕಳಕಳಿ ಇದೆ, ಆ ಹೋರಟಕ್ಕೆ ನಮ್ಮ ಬೆಂಬಲ ಕೂಡ ಇದೆ. ಆ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯಬಾರದು ಎಂಬುದು ನಮ್ಮ ಇಚ್ಛೆಯಾಗಿದೆ. ಯಾವ ಸಂದರ್ಭದಲ್ಲಿ ಯಾರ ಮೇಲೆ ಒತ್ತಡ ತಂದು ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಯ್ದುಕೊಳ್ಳಬೇಕೆಂಬ ಬಗ್ಗೆ ಚಿಂತನೆ ನಡೆದಿದೆ. ಈ ಹಿನ್ನೆಲೆಯಲ್ಲಿ ಅಲ್ಲಿ ಶಾಂತ ವಾತಾವರಣ ನಿರ್ಮಾಣ ಆಗಬೇಕೆಂಬ ಕಳಕಳಿಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಈ ದಿಸೆಯಲ್ಲಿ ಸರ್ಕಾರ ತನ್ನ ನಿಲುವು ಪ್ರಕಟಿಸಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದಂತಹ ಮತ್ತು ರಾಜ್ಯದ ಮೂಲಭೂತ ಹಿತಾಸಕ್ತಿಗಳನ್ನು ಒಳಗೊಂಡಿರತಕ್ಕಂತಹ ಪ್ರಸ್ತಾವನೆಯನ್ನು ಮಾನ್ಯ ಸಿಂಧ್ಯಾರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ಅವರು ಹೇಳಿರತಕ್ಕಂತಹ ಮಾತುಗಳಲ್ಲಿ ಬಹಳ ಜವಾಬ್ದಾರಿ ಇದೆ ಮತ್ತು ಹೊಣೆಗಾರಿಕೆ ಇದೆ. ಕೃಷ್ಣೆ ಅಗಲೀ, ಕಾವೇರಿ ಅಗಲೀ ಕಳೆದ ಹತ್ತಾರು ವರ್ಷಗಳಿಂದ ಪಕ್ಷಾತೀತವಾದಂತಹ ನಿರ್ಣಯವನ್ನು ಈ ಸದನ ಅಂಗೀಕರಿಸಿದೆ. ಮತ್ತು ಅಧಿಕಾರಕ್ಕೆ ಬಂದಂತಹ ಎಲ್ಲಾ ಸರ್ಕಾರಗಳೂ ಕೂಡ ಆ ಚೌಕಟ್ಟಿನಲ್ಲಿಯೇ ತಮ್ಮ ಕಾರ್ಯಗಳನ್ನು ಮುಂದುವರೆಸಿಕೊಂಡು ಬಂದಿವೆ. ಕರ್ನಾಟಕದ ಮೂಲಭೂತ ಹಕ್ಕು ಮತ್ತು ನದಿ ನೀರುಗಳಲ್ಲಿ ನಮಗೆ ದಕ್ಕಬೇಕಾಗಿರತಕ್ಕಂತಹ ನ್ಯಾಯ ಬದ್ಧವಾದಂತಹ ನೀರಿನ ಪ್ರಮಾಣವನ್ನು ದೊರಕಿಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರಗಳು ಎಲ್ಲಾ ಪ್ರಯತ್ನಗಳನ್ನೂ ಮಾಡಿವೆ. ಇವತ್ತು ಕೃಷ್ಣಾ ಜಲಾನಯನ ಪ್ರದೇಶದ ಈ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ದಿವಸಗಳ ಕಾಲ ವಾದವಿವಾದಗಳು ನಡೆದಿವೆ. ಕರ್ನಾಟಕದ ಒರಿಜಿನಲ್ ಸ್ಯೂಟ್

ಮೇಲೆ ವಾದ ವಿವಾದಗಳು ನಡೆದಿವೆ. ಹಾಗೆಯೇ ಆಂಧ್ರಪ್ರದೇಶದವರು ಸಲ್ಲಿಸಿರತಕ್ಕಂತಹ ಒರಿಜಿನಲ್ ಸ್ಯೂಟ್ ಮೇಲಿಯೂ ಕೂಡ ವಾದವಿವಾದಗಳು ನಡೆದಿವೆ. ನಮ್ಮ ದೇಶದ ರಾಜ್ಯಂಗದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ರಾಜ್ಯ ಸರ್ಕಾರಗಳೂ ಕೂಡ ರಾಜ್ಯಾಂಗದ ಚೌಕಟ್ಟನ್ನು ಮೀರಿ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಚರ್ಚಾತೀತವಾದಂತಹ ವಿಚಾರವಾಗಿದೆ. ಆದರೆ ಜನಗಳಲ್ಲಿ ಅದರಲ್ಲೂ ಕರ್ನಾಟಕ ಜನರಲ್ಲಿ ಕೆಲವು ಸಂಶಯಗಳು ಬಂದಿವೆ. ಮತ್ತು ಕಳವಳ ಇದೆ, ಗಾಬರಿ ಇದೆ. ಎಲ್ಲಿ ಕನ್ನಡ ನಾಡಿಗೆ ಅನ್ಯಾಯವಾದೀತು ಎನ್ನುವಂತಹ ವಿಚಾರ ನಮ್ಮೆಲ್ಲರನ್ನೂ ಬಾಧಿಸುತ್ತಿದೆ. ಆದರೆ ಇದರ ಬಗ್ಗೆ ನಾವು ಏಕಪಕ್ಷೀಯವಾದಂತಹ ನಿರ್ಧಾರಗಳನ್ನು ತೆಗೆದುಕೊಂಡು ಕಾನೂನನ್ನು ಉಲ್ಲಂಘನೆ ಮಾಡುವುದರ ಮೂಲಕ ಕನ್ನಡ ನಾಡಿನ ಹಿತಾಸಕ್ತಿಯನ್ನು ಕಾಪಾಡತಕ್ಕಂಥಾದ್ದು ಸಾಧ್ಯವಿಲ್ಲ ಎಂಬುದು ನನ್ನ ನಂಬಿಕೆಯಾಗಿದೆ. ನಿನ್ನೆ ತಾನೇ ಮಾನ್ಯ ನೀರಾವರಿ ಸಚಿವರು ಮತ್ತು ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಕೆಲವು ಸ್ನೇಹಿತರು ಅಲ್ಲಿಗೆ ಹೋಗಿ ಯಾರು ಅಲ್ಲಿ ಕರಸೇವೆ ಮಾಡಬೇಕು ಎನ್ನುವಂತಹ ನಿರ್ಧಾರಕ್ಕೆ ಬಂದಿದ್ದಾರೋ ಅವರ ಜೊತೆಯಲ್ಲಿ ಮಾತುಕತೆಗಳನ್ನು ಆಡಿ ಅವರ ಮನ ಒಲಿಸಿಕೊಳ್ಳುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್ ಅವರನ್ನೂ ಕೂಡ ಕರೆದುಕೊಂಡು ಹೋಗಬೇಕೆಂಬ ಆಸೆ ಮಾನ್ಯ ನೀರವಾರಿ ಸಚಿವರಿಗೆ ಇತ್ತು. ಆದರೆ ಕಾರಣಾಂತರಗಳಿಂದ ಮಾನ್ಯ ಶೆಟ್ಟರ್‌ರವರು......

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯದ ಬಗ್ಗೆ ನಾನು ಒಂದು ಸ್ಪಷ್ಟೀಕರಣವನ್ನು ನೀಡಬಯಸುತ್ತೇನೆ. ಬಿಜಾಪುರಕ್ಕೆ ಹೋಗುವ ಬಗ್ಗೆ ಲಾಸ್ಟ್ ಮಿನಿಟ್‌ನಲ್ಲಿ ನನಗೆ ವಿಷಯ ಕಮ್ಯೂನಿಕೇಟ್ ಆಗಿದ್ದರಿಂದ ನಾನು ಅಲ್ಲಿಗೆ ಹೋಗಲಿಕ್ಕೆ ಅವಕಾಶವಾಗಲಿಲ್ಲ ಎಂದು ತಿಳಿಸಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ನಿನ್ನೆ ಮಧ್ಯಾಹ್ನ 12 ಗಂಟೆಗೆ ಮಾನ್ಯ ಸಚಿವರು ನಾವು ಅಲ್ಲಿಗೆ ಹೋಗಬೇಕಾಗುತ್ತದೆ ಎಂದು ತಿಳಿಸಿದರು. ಅವಸರದಲ್ಲಿ ತೆಗೆದು ಕೊಂಡಂತಹ ನಿರ್ಣಯ ಅದಾಗಿತ್ತು. ಮಾನ್ಯ ವಿರೋಧ ಪಕ್ಷದ ಎಲ್ಲಾ ಮುಖಂಡರನ್ನೂ ಕೂಡ ಅಲ್ಲಿಗೆ ಜೊತೆಗೆ ಕರೆದುಕೊಂಡು ಹೋಗಬೇಕೆಂಬ ಸೂಚನೆಯನ್ನು ನಾನು ಮಾನ್ಯ ನೀರಾವರಿ ಸಚಿವರಿಗೆ ನೀಡಿದ್ದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಡವಾಗಿ ಕರೆ ಬಂದಿದ್ದರಿಂದ ಅವರು ಹೋಗಲಾಗಲಿಲ್ಲ. ಮತ್ತೆ ನಮ್ಮ ಕೆಲವು ವಿರೋಧ ಪಕ್ಷದ ಮುಖಂಡರುಗಳಿಗೆ ನಮಗೆ ಕರೆಯನ್ನೇ ನೀಡಲು ಸಾಧ್ಯವಾಗಲಿಲ್ಲ. ಬಿಜಾಪುರದಲ್ಲಿ ಕರಸೇವೆ ಮಾಡಬೇಕು ಎನ್ನುವ ಜನರ ಪ್ರಾಮಾಣಿಕತೆಯಲ್ಲಿ ನಮಗೆ ಸಂಪೂರ್ಣವಾದಂತಹ ವಿಶ್ವಾಸ ಇದೆ. ಅವರು ಕನ್ನಡ ನಾಡಿನ ಹಿತವನ್ನು ರಕ್ಷಿಸಬೇಕೆಂದು ಬಯಸಿದವರಾಗಿದ್ದಾರೆ. ಆದರೆ ಆ ಹಿತವನ್ನು ಯಾವೊಂದು ಚೌಕಟ್ಟಿನಲ್ಲಿ ರಕ್ಷಣೆ ಮಾಡಿಕೊಳ್ಳಬೇಕೆಂಬ ಬಗ್ಗೆ ಈ ಸದನದ ಪರವಾಗಿ ನಾನು ಅವರಲ್ಲಿ ವಿಶೇಷವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ, ಇನ್ನೂ ಕೆಲವೇ ದಿನಗಳಲ್ಲಿ ಸುಪ್ರೀಂಕೋರ್ಟ್‌ನ ತೀರ್ಮಾನ ಹೊರಬರಲಿದೆ. ಆದುದರಿಂದ ಸುಪ್ರೀಂಕೋರ್ಟಿನ ತೀರ್ಮಾನ ಹೊರಬರುವವರೆಗೆ ಕೂಡ ಇಂತಹ ಯಾವುದೇ ಕೆಲಸವನ್ನು ಹಮ್ಮಿಕೊಳ್ಳದೇ ಇರತಕ್ಕದ್ದು ಲೇಸು ಎಂದು ನಾನು ಹೇಳಬಯಸುತ್ತೇನೆ. ಇದು ಈ ಸದನದ

ಒಟ್ಟಾರೆ ಅಭಿಪ್ರಾಯ ಎಂದು ನಾನು ಭಾವನೆ ಮಾಡುತ್ತೇನೆ. ಆದ್ದರಿಂದ ನಾವೆಲ್ಲಾ ವಿರೋಧ ಪಕ್ಷದ ನಾಯಕರು ಮಾಡಬೇಕಾದುದು ಪಬ್ಲಿಕ್ ಅಪೀಲ್ ಅವರಿಗೆ ಮಾಡುವುದರ ಮೂಲಕ ಈ ಕರ ಸೇವೆ ಮಾಡುವುದನ್ನು ಕೈ ಬಿಡಬೇಕೆಂದು ಸರ್ಕಾರದ ವತಿಯಿಂದ ನಾನು ಅವರಿಗೆ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಇನ್ನು ಮುಂದೆ ಗಮನ ಸೆಳೆಯುವ ಸೂಚನೆಗಳು.

ಶ್ರೀ ಜಗದೀಶ್ ಶೆಟ್ಟರ್ : ಶೂನ್ಯ ವೇಳೆಯಲ್ಲಿ ಕೆಲವೊಂದು ವಿಷಯಗಳು ಇವೆ; ಅದನ್ನು ಪ್ರಸ್ತಾಪ ಮಾಡಬೇಕಾಗಿತ್ತು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ನ ಪೀಠ ಸ್ಥಾಪನೆ

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠವನ್ನು ಸ್ಥಾಪನೆಯಾಗಬೇಕೆಂದು 30-40 ವರ್ಷಗಳಿಂದ ಅಲ್ಲಿಯ ಜನ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಎರಡು ಮಾತಿಲ್ಲ. ಕಳೆದ ವರ್ಷ ಸತತವಾಗಿ ಎರಡು-ಮೂರು ತಿಂಗಳುಗಳಿಂದ ಕೋರ್ಟ್ ಬಾಯ್‌ಕಾಟ್ ಆಗಿ ಸತ್ಯಾಗ್ರಹ ನಡೆಯಿತು. ಅತ್ಯಂತ ಗಂಭೀರವಾದಂತಹ ವಾತಾವರಣ ನಿರ್ಮಾಣವಾದ ಸಂದರ್ಭದಲ್ಲಿ ಹಿಂದಿನ ಸರ್ಕಾರದ ಮೇಲೆ ಅಲ್ಲಿದ್ದಂತಹ ಸತ್ಯಾಗ್ರಹಿಗಳು ಒತ್ತಾಯ ತಂದರು. ಹೈಕೋರ್ಟ್ ಮೇಲೆ ಒತ್ತಡ ಬಂದಿತು. ಆ ಸಂದರ್ಭದಲ್ಲಿ ಮಾನ್ಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಒಂದು ಕಮಿಟಿ ಮಾಡಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಎಲ್ಲಿ ಸ್ಥಾಪನೆ ಮಾಡಬೇಕು, ಯಾವುದು ಸೂಕ್ತ, ಅಲ್ಲಿ ಮಾಡಬೇಕು, ಬೇಡ ಎನ್ನುವ ಬಗ್ಗೆ ಚಿಂತನೆ ಮಾಡುವ ಸಲುವಾಗಿ ಒಂದು ವರ್ಷದ ಹಿಂದೆ ಐದು ಜನರ ಒಂದು ಕಮಿಟಿ ನೇಮಕ ಮಾಡಿತು. ಆ ಸಂದರ್ಭದಲ್ಲಿ ಆ ಚಳುವಳಿಯ ಒಂದು ಗಂಭೀರ ಸ್ವರೂಪ ಪಡೆದ ಸಂದರ್ಭದಲ್ಲಿ ಸರ್ವ ಪಕ್ಷದ ಎಲ್ಲ ಶಾಸಕರೂ, ನಾಯಕರೂ ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಭೇಟಿಯಾಗಿದ್ದೆವು. ಸತ್ಯಾಗ್ರಹ ಬಹಳ ದೀರ್ಘಾವಧಿಯಿಂದ ನಡೆಯುತ್ತಿದೆ; ಸಾರ್ವಜನಿಕರಿಂದ ಅಶಾಂತಿ ಮೂಡುತ್ತಿದೆ, ಇದು ಒಂದು ಜೆನ್ಯೂನ್ ಡಿಮಾಂಡ್. ಇದರ ಬಗ್ಗೆ ಸಂಶಯ ಇಲ್ಲ. ರಾಷ್ಟ್ರದ ಬೇರೆ ಬೇರೆ ರಾಜ್ಯ ಸಾಕಷ್ಟು ಹೈಕೋರ್ಟ್ ಬೆಂಚ್‌ಗಳು ಸ್ಥಾಪನೆಯಾಗಿವೆ. ಹೈಕೋರ್ಟ್ ಬೆಂಚ್ ಸ್ಥಾಪನೆ ಆಗುವ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಒಪ್ಪಿಗೆ ಇರಬಹುದು, ಕೇಂದ್ರ ಸರ್ಕಾರದ ಒಪ್ಪಿಗೆ ಇರಬಹುದು, ಆದರೆ ಹೈಕೋರ್ಟ್ ಕನ್‌ಸೆಂಟ್ ಬೇಕೆನ್ನುವ ಒಂದು ತಾಂತ್ರಿಕ ಕಾನೂನು ಚೌಕಟ್ಟು ಇರುವುದರಿಂದ ಹೈಕೋರ್ಟ್ ಒಪ್ಪಿಗೆ ಬೇಕಾಗಿದೆ. ನಾನು ಕಳೆದ ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಹೇಳಿದರು, ಸರ್ಕಾರ ಇದರ ಪರವಾಗಿ ಇದೆ, ನಾವು ಇದರ ಬಗ್ಗೆ ವೈಯಕ್ತಿಕ ಆಸಕ್ತಿ ತೆಗೆದುಕೊಂಡು ನಾವು ಮತ್ತು ಕಾನೂನು ಸಚಿವರು ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಭೇಟಿಯಾಗಿ ಇದರ ಬಗ್ಗೆ ಹೆಚ್ಚಿನ ಒತ್ತಡ ತೆಗೆದುಕೊಂಡು ಬರುತ್ತೇವೆಂದು

ಹೇಳಿದ್ದರು. ಕಳೆದ ಐದು ತಿಂಗಳಲ್ಲಿ ರಾಜ್ಯ ಸರ್ಕಾರದ ಕಡೆಯಿಂದ ಇದರ ಬಗ್ಗೆ ಏನು ಪ್ರಯತ್ನವಾಗಿದೆ ಎಂದು ಗೊತ್ತಾಗಲಿಲ್ಲ. ಅಲ್ಲಿ ಚಳುವಳಿ ಮಾಡಬೇಕು, ಹೋರಾಟ ಮಾಡಬೇಕು ಎನ್ನುವ ವಾತಾವರಣ ನಿರ್ಮಾಣವಾಗುತ್ತಿದೆ. ಒಂದು ವರ್ಷ ತಡೆದ ಮೇಲೆ ಹೈಕೋರ್ಟ್‌ನಲ್ಲಿ ಐದು ಜನರ ಒಂದು ಕಮಿಟಿ ಮಾಡಿದ್ದರು. ಅವರು ಯಾವುದೇ ಪ್ರದೇಶಗಳಿಗೆ ಹೋಗಲಿಲ್ಲ. ಇದರ ಬಗ್ಗೆ ಮೀಟಿಂಗ್ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ time bound ಫಿಕ್ಸ್ ಮಾಡಲಿಲ್ಲ. ಇವತ್ತಿನವರೆಗೂ ಅವರು ವರದಿ ಕೊಟ್ಟಿಲ್ಲ. ಹೀಗಾಗಿ ಇವತ್ತು ಅಲ್ಲಿದ್ದಂತಹ ನ್ಯಾಯವಾದಿಗಳು ಇರಬಹುದು, ಅಲ್ಲಿ ಇದ್ದಂತಹ ಸಾರ್ವಜನಿಕರು ಇರಬಹುದು ಒಂದು ರೀತಿಯಿಂದ ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಮೂರು-ನಾಲ್ಕು ತಿಂಗಳು ಹೋರಾಟ ಮಾಡಿದರೂ ಇದಕ್ಕೆ ಕನ್‌ಸೆಂಟ್ ಸಿಗಲಿಲ್ಲ, ಇದಕ್ಕೆ ಸರ್ಕಾರವಾಗಲಿ, ಹೈಕೋರ್ಟ್ ಆಗಲಿ ಗಮನ ಹರಿಸಲಿಲ್ಲ. ಎನ್ನುವ ಚಿಂತನೆ ಅಲ್ಲಿ ನಡೆಯುತ್ತಿದೆ. ಇವತ್ತಿನ ಪತ್ರಿಕೆಯಲ್ಲಿ ಹೈಕೋರ್ಟ್ ಪೀಠ, ಹುಬ್ಬಳ್ಳಿ-ಧಾರವಾಡ ವಕೀಲರ ಹೋರಾಟಕ್ಕೆ ಮತ್ತೊಂದು ಚಾಲನೆ ಎಂದು ಬಂದಿದೆ ಮಾರ್ಚ್ 27 ನೇ ತಾರೀಖಿಗೆ ಕಮಿಟಿ ರಚನೆಯಾಗಿ ಒಂದು ವರ್ಷವಾಗುತ್ತಿದೆ. ಒಂದು ವರ್ಷದಲ್ಲಿ ಯಾವ ರಿಪೋರ್ಟ್ ಕೂಡ ಬರಲಿಲ್ಲ. ಮಾರ್ಚ್ 27ನೇ ತಾರೀಖು ನೋಡಿಕೊಂಡು ನಾವು ಮತ್ತೆ ಚಳುವಳಿ ಪ್ರಾರಂಭ ಮಾಡುತ್ತೇವೆಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಹುಬ್ಬಳ್ಳಿ ಮತ್ತು ಧಾರವಾಡದ ವಕೀಲರು ಈ ವರದಿಯನ್ನು ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ ಮತ್ತೆ ನಾವು ಬೀದಿ ಹೋರಾಟಕ್ಕೆ ಇಳಿಯಬೇಕು, ಸರ್ಕಾರದ ಕಡೆಯಿಂದ ಏನಾದರೂ ಪ್ರಯತ್ನ ಮಾಡಿ ಹೈಕೋರ್ಟ್ ಮೇಲೆ ಒತ್ತಡ ತಂದು ಇದರ ಬಗ್ಗೆ ಏಕೆ ವರದಿ ಸಲ್ಲಿಸಬಾರದು? ಹೈಕೋರ್ಟ್‌ನಿಂದ ಕನ್‌ಸೆಂಟ್ ತೆಗೆದುಕೊಳ್ಳುವ ಪ್ರಯತ್ನವೇನಾದರೂ ಆಗುತ್ತದೆಯೋ ಹೇಗೆ? ಆದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಕಾನೂನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಂಡು ಮುಖ್ಯ ನ್ಯಾಯಾಧೀಶರಿಗೆ ಪರ್ಸನಲ್ಲಾಗಿ ಬೇಟಿಯಾಗಿ ಜನರ ಭಾವನೆಗಳನ್ನು, ಜನರ ಬಯಕೆಗಳನ್ನು ಜನರ ಬೇಡಿಕೆ ಏನಿದೆ ಇದರ ಬಗ್ಗೆ ಸ್ಪಂದನೆ ಮಾಡಬೇಕೆಂದು ಸರ್ಕಾರದ ಪರವಾಗಿ ಹೈಕೋರ್ಟ್ ಮೇಲೆ ಒತ್ತಡ ತರಬೇಕಾಗಿದೆ. ಹೈಕೋರ್ಟ್‌ನಲ್ಲಿ ಐದು ಜನರ ಕಮಿಟಿ ಮಾಡಿದರು, ನ್ಯಾಯಾಂಗ ಆಯೋಗ, ಮತ್ತೊಂದು ಯಾವುದೇ ಕಮಿಟಿ ಬರಲಿ ಅವರಿಗೆ ಮೂರು ತಿಂಗಳು, ಆರು ತಿಂಗಳು ಒಂದು ವರ್ಷವೆಂದು ಸಮಯ ಕೊಡುತ್ತಾರೆ. ಇಲ್ಲಿ ಐದು ಜನರ ಕಮಿಟಿ ಮಾಡಿ ಅವರಿಗೆ ಯಾವುದೇ ಪೀರಿಯಡ್ ಫಿಕ್ಸ್ ಮಾಡಲಿಲ್ಲ. ಇಷ್ಟು ಅವಧಿಯಲ್ಲಿ ನೀವು ರಿಪೋರ್ಟ್ ಕೊಡಬೇಕೆಂದು ಹೇಳಲಿಲ್ಲ. ಆ ಕಮಿಟಿ ಮೀಟಿಂಗ್ ಆಗಿದೆ ಇಲ್ಲವೆಂದು ಗೊತ್ತಿಲ್ಲ. ಹೈಕೋರ್ಟಿನಿಂದ ಏನಾದರೂ ಇಂಟಿಮೇಷನ್ ಬಂದಿತ್ತು ಅಥವಾ ಇಲ್ಲವೆಂದು ಗೊತ್ತಾಗುತ್ತಿಲ್ಲ. ಜನರು ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಇದರ ಬಗ್ಗೆ ಸಂಪೂರ್ಣ ಚಿತ್ರವನ್ನು ಕೊಡುವ ಸಲುವಾಗಿ ಹೋರಾಟ ಮಾಡಿ ಗಂಭೀರ ಪರಿಸ್ಥಿತಿಗೆ ಹೋಗಬಾರದು ಎಂದು ನಮ್ಮ ಕಳಕಳಿ ಇರುವುದರಿಂದ ಇದರ ಬಗ್ಗೆ ಸರ್ಕಾರ ಬೆಳಕು ಚೆಲ್ಲಬೇಕು. ಸರ್ಕಾರ ಇಲ್ಲಿಯವರೆಗೆ ಮಾಡಿದ ಪ್ರಯತ್ನ ಏನಿದೆ ಅದನ್ನು ದಯವಿಟ್ಟು ಈ ಸಭೆಗೆ ಹೇಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕಾನೂನು ಸಚಿವರು ಬರುತ್ತಾರೆ. ಅವರು ಬಂದ ನಂತರ ಚರ್ಚೆ ಮಾಡಿದರೆ ಅವರು ಅದಕ್ಕೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ಅವರು ಸರ್ಕಾರದ ಪರವಾಗಿ ಹೇಳುತ್ತಿದ್ದಾರೆ, ಕಾನೂನು ಸಚಿವರು ಬರಲಿ, ಬಂದ ಮೇಲೆ ವಿಷಯ ಹೇಳಿದರೆ ಉತ್ತಮ.

+ ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಒಂದು ವಾರದ ಹಿಂದೆ ಮುಖ್ಯ ನ್ಯಾಯಾಧೀಶರಿಗೆ ನಾವು ಒಂದು ಪತ್ರ ಬರೆದಿದ್ದೇವೆ. ಆದಷ್ಟು ಬೇಗ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಆಗುತ್ತದೆ, ಅಥವಾ ಇಲ್ಲವೆಂದು ಸರ್ಕಾರಕ್ಕೆ ರಿಪೋರ್ಟ್ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಎರಡನೆಯದಾಗಿ ಧಾರವಾಡ, ಹುಬ್ಬಳ್ಳಿ ಮತ್ತು ಗುಲ್ಬರ್ಗಾ ಹೀಗೆ ಎಲ್ಲಾ ಕಡೆಯ ವಕೀಲರ ಸಂಘಗಳವರೂ ಇಲ್ಲಿಗೆ ಬಂದು ಐದು ಜನ ನ್ಯಾಯಾಮೂರ್ತಿಗಳನ್ನು ಭೇಟಿ ಮಾಡಿದ್ದಾರೆ. ರಿಪೋರ್ಟ್ ಕೊಡುವುದು ಏಕೆ ತಡವಾಗಿದೆ ಎಂದು ಗೊತ್ತಿಲ್ಲ, ಕರ್ನಾಟಕ ವಕೀಲರ ಒಕ್ಕೂಟದ ಪರವಾಗಿ ನಾವು ಈಗಾಗಲೇ ಮುಖ್ಯ ನ್ಯಾಯಾಧೀಶರಿಗೆ ಹೇಳಿದ್ದೇವೆ. ಏಕೆಂದರೆ,ಈ ಬಗ್ಗೆ ತಡ ಮಾಡಬಾರದು. ಅವರು ಈಗಾಗಲೇ ಹೈಕೋರ್ಟ್ ಮುಂದೆ ಮುಷ್ಕರ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದನ್ನೂ ಕೂಡ ಕಾಗದದಲ್ಲಿ ಬರೆದಿದ್ದಾರೆ ಎಂದು ನಾನು ಹೇಳಿದ್ದೇನೆ. ದಯವಿಟ್ಟು ಅಂತಹ ಒಂದು ಸಂಗತಿ ಆಗಬಾರದು. ಹೈಕೋರ್ಟ್ ಮುಂದೆ ಬಂದು ಧಾರವಾಡದವರು, ಹುಬ್ಬಳ್ಳಿಯವರು ಮುಷ್ಕರ ಮಾಡುವ ಮೊದಲೇ ಇದು ತೀರ್ಮಾನವಾಗಬೇಕು. ಈ ವಿಷಯದ ಬಗ್ಗೆ ಏನು ಚರ್ಚೆ ಆಗಿದೆ ಎನ್ನುವುದಾದರೂ ರಿಪೋರ್ಟ್ ಸರ್ಕಾರಕ್ಕೆ ಕೊಡಬೇಕು. ಐದು ಜನ ನ್ಯಾಯಮೂರ್ತಿಗಳು ತೀರ್ಮಾನ ಮಾಡಿ ಮುಖ್ಯ ನ್ಯಾಯಾಧೀಶರಿಗೆ ಕೊಟ್ಟರೆ, ಮುಖ್ಯ ನ್ಯಾಯಾಧೀಶರು ಮುಖ್ಯಮಂತ್ರಿಗಳಿಗೆ ಕೊಡುತ್ತಾರೆ. ಆದ್ದರಿಂದ ದಯವಿಟ್ಟು ಆದಷ್ಟು ಬೇಗ ಅದನ್ನು ಮಾಡಬೇಕು, ತಡ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೆ, ಈ ಹೈಕೋರ್ಟ್‌ಪೀಠದ ಬಗ್ಗೆ ರೈಲ್ವೆ ವಲಯದ ಬಗ್ಗೆ ಈ ವಿಷಯ ಉತ್ತರ ಕರ್ನಾಟಕದಲ್ಲಿ ಬಹಳ ಸೂಕ್ಷ್ಮವಾದ ವಿಷಯವಾಗಿ, ಅದು ಬಹಳ ಗಂಭೀರವಾದ ದುರಂತದ ಮಟ್ಟಕ್ಕೆ ತಲುಪತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಧಾರವಾಡ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಅಮರಣಾಂತರ ಉಪವಾಸ ಕುಳಿತ್ತಿದ್ದರು, ಸುಮಾರು ಮೂರು-ನಾಲ್ಕು ಜನ ಕೊನೆ ಹಂತಕ್ಕೆ ಬಂದು ಬಿಟ್ಟಿದ್ದರು. ಅವರು ಪ್ರಾಣ ತ್ಯಾಗ ಮಾಡುತ್ತಾರೆನ್ನುವ ಮಟ್ಟಕ್ಕೆ ಬಂದಾಗ ಏನಾಯಿತು ಎನ್ನುವುದು ತಮಗೂ ಗೊತ್ತಿದೆ. ಇವೆಲ್ಲಾ ಆಗಿ ಹೈಕೋರ್ಟ್ ಪೀಠ ಏಕೆ ಆಗುತ್ತಿಲ್ಲವೆಂದು ಜನರ ಮನಸ್ಸಿನಲ್ಲಿ ದೊಡ್ಡ ಗುಂಗು ಆಗಿ ಉಳಿದಿದೆ. ನಮ್ಮ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್. ಪಟೇಲರು ಎರಡು-ಮೂರು ಸಲ ನಮ್ಮ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಭೇಟಿಯಾಗಿ ಅವರ ಮನವೊಲಿಸಿದಮೇಲೆ ಬಹುಶಃ ನಾವು ಅವರಿಗೆ ಭೇಟಿಯಾದಾಗ ಅವರು ಇದನ್ನು ಮಾಡುವ ಮನಸ್ಸಿದೆ ಎಂದು ನಮಗನ್ನಿಸಿತು. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಅವರ ಮನವೊಲಿಸಬೇಕು. ಇದು

ಇಲ್ಲದೆ ಇದ್ದರೆ ಹಾಗೆಯೇ ಆಗುವುದಿಲ್ಲ. ಕಮಿಟಿ ಮಾಡಿದ್ದಾರೆ, ಅವರು ಬಂದು ರಿಪೋರ್ಟ್ ಕೊಡಬೇಕೆಂದು ಹೇಳಿದರೆ, ಉತ್ತರ ಕರ್ನಾಟಕದಲ್ಲಿ ಬಹಳ ದೊಡ್ಡ ಕ್ಷೋಭೆ ಆಗುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಅದಕ್ಕೆ ದಯೆವಿಟ್ಟು ತಾವೂ ಕೂಡ ಅದನ್ನು ಮಾನ್ಯ ಮುಖ್ಯ ನ್ಯಾಯಧೀಶರಿಗೆ ಭೇಟಿಯಾಗಿ ಅವರ ಮನವೊಲಿಸಿದರೆ ಈ ಕಾರ್ಯ ಆಗುತ್ತದೆ. ಅಲ್ಲಿ ಏನಿದೆ ಎಂದು ವಕೀಲರಿಗೆ ಗೊತ್ತು. ಅದು 'ಮೇ, ಶಲ್' ಎಂದು ಇದೆ. 'ಮೇ' ಇಂಗ್ಲೀಷ್ ಅರ್ಥ, 'ಮೇ' ಎನ್ನುವುದು 'ಶಲ್' ಎಂದು ತಿಳಿಯಬೇಕೆಂದು ಸುಪ್ರೀಂಕೋರ್ಟ್ ರೂಲಿಂಗ್ ಆಗಿದೆ. ದಯವಿಟ್ಟು ಅದನ್ನು ಏನಾದರೂ ಮಾಡಿ ತಾವು ಮುಖ್ಯ ಮಂತ್ರಿಗಳಾದಂತಹ ಕಾಲದಲ್ಲಿ ಮಾಡಿದರೆ ತಮಗೆ ಒಂದು ದೊಡ್ಡ ಹೆಸರು ಬರುತ್ತದೆ.

11. 50 ಎ.ಎಂ

ಮಾನ್ಯ ಮುಖ್ಯಮಂತ್ರಿಗಳು ಹೈಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿ ಮಾತನಾಡಬೇಕು. ಅದೇ ರೀತಿ ಮುಖ್ಯ ನ್ಯಾಯಾಧೀಶರು ಏನು ಸಮಿತಿಯೊಂದನ್ನು ನೇಮಕ ಮಾಡಿದ್ದಾರೆ ಆ ಸಮಿತಿಯವರನ್ನು ಕೂಡ ಬೇಟಿ ಮಾಡಿ ಆದಷ್ಟು ಬೇಗ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಲು ಸರ್ವ ಪ್ರಯತ್ನಗಳನ್ನೂ ಮುಖ್ಯ ಮಂತ್ರಿಗಳು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕು ಎನ್ನುವ ವಿಚಾರ ಕಳೆದ ಹತ್ತಾರು ವರ್ಷಗಳಿಂದ ಈ ಸದನದ ಒಳಗೆ ಹಾಗೂ ಹೊರಗೆ ಪ್ರಸ್ತಾಪವಾಗುತ್ತಲೇ ಇದೆ. ಆ ಭಾಗದ ಜನರ ಅಭಿಪ್ರಾಯಗಳನ್ನು ಮತ್ತು ಭಾವನೆಗಳನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ನಮ್ಮ ಪಕ್ಷದ ಸರ್ಕಾರ ಆಡಳಿತದಲ್ಲಿ ಇದ್ದಾಗ ಕೂಡ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ನಾವು ಸರ್ವ ಪ್ರಯತ್ನವನ್ನೂ ನಡೆಸಿದ್ದೇವೆ. ಮಾನ್ಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಮೊದಲು ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರವರನ್ನು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಭೇಟಿ ಮಾಡಿ ಮಾತನಾಡಬೇಕು. ಇದಕ್ಕೆ ಸರ್ವೋಚ್ಚ ನ್ಯಾಯಾಲಯದ ಒಪ್ಪಿಗೆಯೂ ಬೇಕಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಈ ವಿಚಾರವನ್ನು ತೀವ್ರವಾಗಿ ಗಮನಿಸಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ನಾನು ಏಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ಒತ್ತಾಯಪೂರ್ವಕವಾಗಿ ಹೇಳುತ್ತೇನೆಂದರೆ ವಿಧಾನ ಸಭೆ ಚುನವಣೆ ನಡೆಯುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷದವರು ಹೊರಡಿಸಿದ ಚುನಾವಣಾ ಪ್ರಣಾಳಿಕೆಯಲ್ಲಿ ಉತ್ತರ ಕರ್ನಾಟಕದ ಭಾಗವು ಬಹಳ ಹಿಂದಿನಿಂದಲೂ ಹೆಚ್ಚು ಅನ್ಯಾಯಕ್ಕೊಳಗಾಗಿದೆ ಎಂದು ಹೇಳಿದ್ದರು. ಅದೇ ರೀತಿಯಲ್ಲಿ ಅವರು ಅಚ್ಚು ಮಾಡಿಸಿದ ಎಲ್ಲಾ ಲಿಟರೇಚರ್‌ಗಳಲ್ಲಿ, ಪೋಸ್ಟರ್‌ಗಳಲ್ಲಿ, ಹ್ಯಾಂಡ್ ಬಿಲ್ಸ್‌ಗಳಲ್ಲಿ ಇದೇ ವಿಷಯವನ್ನು ತಿಳಿಸಿದ್ದರು. ಇಷ್ಟೇ ಅಲ್ಲದೇ ಚುನಾವಣಾ ಭಾಷಣಗಳಲ್ಲೂ

ಕೂಡ ಇದೇ ವಿಚಾರಗಳನ್ನು ಪ್ರತಿಬಿಂಬಿತವಾಗಿದೆ. ಚುನಾವಣೆಗೆ ಮುಂಚೆ ಈ ವಿಷಯಗಳ ಬಗ್ಗೆ ಏನು ಒತ್ತು ಕೊಟ್ಟು ಹೇಳುತ್ತಿದ್ದರೋ ಆ ವಿಚಾರಗಳು ಚುನಾವಣೆಯ ನಂತರ ಮಾನ್ಯ ಎಸ್.ಎಂ. ಕೃಷ್ಣಾ ನೇತೃತ್ವದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಸಂಪೂರ್ಣವಾಗಿ ಮರೆತಿದ್ದಾರೇನೋ ಎಂದೆನಿಸುತ್ತಿದೆ. ಇದಕ್ಕೆ ಅವಕಾಶ ಕೊಡದೇ ಚುನಾವಣೆಗೆ ಮೊದಲೇ ತಾವೇನು ಹೇಳಿದ್ದೀರಿ ಅದನ್ನು ಕಾರ್ಯಗತ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ತಾವು ಕಾರ್ಯಪ್ರವೃತ್ತರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಹುಬ್ಬಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಏನು ಹೇಳಲಾಗುತ್ತದೆ ಈ ರೀತಿಯ ನ್ಯಾಯ ಪೀಠ ಇಡೀ ರಾಷ್ಟ್ರದಲ್ಲಿಯೇ ಮೊದಲು ನಮ್ಮ ರಾಜ್ಯದಲ್ಲಿ ಆಗುತ್ತಿರುವುದೇನಲ್ಲ. ಮಹಾರಾಷ್ಟ್ರದ ನಾಗಪುರದಲ್ಲಿ ಕೂಡ ಇದೆ, ಔರಂಗಾಬಾದ್‌ನಲ್ಲಿ ಕೂಡ ಇದೆ, ಅದೇ ರೀತಿಯಲ್ಲಿ ನಮ್ಮ ರಾಷ್ಟ್ರದ ಬೇರೆ ಭಾಗಗಳಲ್ಲಿ ಹೈಕೋರ್ಟ್ ನ್ಯಾಯಪೀಠಗಳು ಸ್ಥಾಪನೆಯಾಗಿವೆ. ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ನ್ಯಾಯ ಪೀಠ ಸ್ಥಾಪನೆಯಾಗಬೇಕೆಂದು ಅಲ್ಲಿಯ ಜನರು ಬಹಳ ದಿನಗಳಿಂದ ಬೇಡಿಕೆಯನ್ನು ಇಟ್ಟಿದ್ದಾರೆ. ಹೈಕೋರ್ಟ್ ನ್ಯಾಯಪೀಠ ಸ್ಥಾಪನೆಗೆ ಬೇಕಾಗಿರುವ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಅಲ್ಲಿದೆ. ಈ ಎಲ್ಲರ ವರದಿಗಳನ್ನು ತರಿಸಿಕೊಂಡು ಹೈಕೋರ್ಟ್ ನ್ಯಾಯಾಧೀಶರು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಕಾಳಜಿವಹಿಸಿ ಕೆಲಸಗಳನ್ನು ಮಾಡಿಸಬೇಕು. ಈಗಾಗಲೇ ಮಾನ್ಯ ಎಸ್.ಎಸ್. ಪಾಟೀಲ್‌ರವರು ಹಾಗೂ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯಪೀಠ ಸ್ಥಾಪನೆಯಾಗಬೇಕೆನ್ನುವ ಬಹಳ ದಿನಗಳ ಆಸೆಯನ್ನು ಈಡೇರಿಸುವ ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಅಧ್ಯಕ್ಷರಾದ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ (ಅಳಂದ್) : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕ ಎಂದರೆ ಹುಬ್ಬಳ್ಳಿ ಮಾತ್ರ ಬರುವುದಿಲ್ಲ. ಹೈದ್ರಾಬಾದ್ ಕರ್ನಾಟಕದ ಕಡೆಯ ಶಾಸಕರುಗಳು ಯಾರು ಈ ಬಗ್ಗೆ ಮಾತನಾಡಲಿಲ್ಲವೆನ್ನುವ ತಪ್ಪು ಕಲ್ಪನೆ ಜನರಲ್ಲಿ ಬರಬಾರದು. ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠ ಸ್ಥಾಪನೆಯಾಗಬೇಕು ಎನ್ನುವ ಬೇಡಿಕೆಗೆ ನಮ್ಮ ಯಾವ ವಿರೋಧವೂ ಇಲ್ಲ. ಹೈಕೋರ್ಟ್ ನ್ಯಾಯ ಪೀಠ ಸ್ಥಾಪನೆ ಬಗ್ಗೆ ಗುಲ್ಬರ್ಗಾ ಮತ್ತು ಹುಬ್ಬಳ್ಳಿಯಲ್ಲಿ ಉಗ್ರವಾದ ಹೋರಾಟ ನಡೆದಿರುವುದು ಸರ್ಕಾರಕ್ಕೂ ಗೊತ್ತಿದೆ. ಆದುದರಿಂದ ತಾವು ಕ್ಯಾಬಿನೆಟ್‌ನಲ್ಲಿ ಈ ಬಗ್ಗೆ ರೆಸಲ್ಯೂಶನ್ ಮಾಡಿ ಕಳುಹಿಸುವಾಗ ಹುಬ್ಬಳ್ಳಿ ಹಾಗೂ ಗುಲ್ಬರ್ಗಾದಲ್ಲಿ ಹೈಕೋರ್ಟ್ ನ್ಯಾಯ ಪೀಠ ಸ್ಥಾಪನೆಗೆ ರೆಕಮೆಂಡ್ ಮಾಡಿ ಎರಡೂ ಕಡೆಗಳಲ್ಲಿ ನ್ಯಾಯ ಪೀಠ ಸ್ಥಾಪನೆ ಮಾಡಿಸಿದರೆ ತುಂಬಾ ಒಳ್ಳೆಯದು. ಇದೇ ನಮ್ಮ ವಿನಮ್ರ ವಿನಂತಿಯಾಗಿದೆ. ಹಿಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ಇದೇ ವಿಚಾರವನ್ನು ಹೇಳಿದ್ದೆ. ಈಗ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಿ ಗುಲ್ಬರ್ಗಾದಲ್ಲಿರುವ ಎಲ್ಲಾ ಕೇಸ್‌ಗಳನ್ನು ಹುಬ್ಬಳ್ಳಿಗೆ ವರ್ಗ

ಮಾಡಿದರೆ ಗುಲ್ಬರ್ಗಾದಲ್ಲಿರುವ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಈಗೇನು ಗುಲ್ಬರ್ಗಾ ಸಾರ್ವಜನಿಕರು ಬೆಂಗಳೂರಿನ ಹೈಕೋರ್ಟ್‌ಗೆ ಬಂದು ಕೇಸ್‌ಗಳನ್ನು ಇತ್ಯರ್ಥ ಮಾಡಿಕೊಳ್ಳಲು ವ್ಯವಸ್ಥೆ ಇದೆಯೇ ಅದೇ ರೀತಿಯ ವ್ಯವಸ್ಥೆಯನ್ನು ನೀವು ಅಲ್ಲಿ ಮಾಡಬೇಕಾಗುತ್ತದೆ. ಅದೇ ರೀತಿ ಗುಲ್ಬರ್ಗಾದಲ್ಲೂ ಕೂಡ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡುವಲ್ಲಿ ವಿಶೇಷ ಕಾಳಜಿಯನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಬೇಕೆಂದು ಅಧ್ಯಕ್ಷರಾದ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

+ ಶ್ರೀ. ಬಿ.ಹೆಚ್ ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೊಸ ಜಿಲ್ಲೆಗಳನ್ನು ಮಾಡುವಲ್ಲಿ ಹಾಗೂ ಜಿಲ್ಲಾ ಆಡಳಿತದ ಬಗ್ಗೆ ಹೊಸ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್. ಪಟೇಲ್‌ರವರು ಹೇಗೆ ದಿಟ್ಟ ನಿರ್ಣಯವನ್ನು ತೆಗೆದುಕೊಂಡರೋ ಅದೇ ರೀತಿಯಲ್ಲಿ ಇಂದಿನ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ. ಕೃಷ್ಣಾರವರು ಹುಬ್ಬಳ್ಳಿಯಲ್ಲಿ ನ್ಯಾಯ ಪೀಠವನ್ನು ಸ್ಥಾಪನೆ ಮಾಡುವಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕೆಂದರೆ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಅಲ್ಲಿನ ನ್ಯಾಯವಾದಿಗಳೆಲ್ಲರೂ ಧರಣಿಯನ್ನು ಮಾಡುತ್ತಿದ್ದಾಗ ಎಸ್.ಎಂ. ಕೃಷ್ಣರವರು ಅವರುಗಳನ್ನು ಭೇಟಿಯಾಗಿ ಅವರ ಬೇಡಿಕೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ. ಇಂದು ಶಾಸನ ಸಭೆಯ ಸದಸ್ಯರುಗಳ ಅಭಿಪ್ರಾಯ, ಸಾರ್ವಜನಿಕ ಹಿತದೃಷ್ಟಿ, ಇವೆಲ್ಲವುಗಳನ್ನು ನೋಡಿಕೊಂಡು ವಿಳಂಬ ಮಾಡದೇ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯಪೀಠವನ್ನು ಸ್ಥಾಪನೆ ಮಾಡಬೇಕು. ಇದರ ವಿಳಂಬಕ್ಕೆ ಸಂಬಂಧಪಟ್ಟಂತೆ, ನ್ಯಾಯಾಲಯಗಳು ಇನ್ನೂ ವರದಿ ಕೊಟ್ಟಿಲ್ಲದಿರುವ ಬಗ್ಗೆಯಾಗಲೀ ಅಥವಾ ನಾವು ನಿರ್ಣಯುವನ್ನು ತೆಗೆದುಕೊಂಡಿಲ್ಲವೆಂದಾಗಲಿ ಅಥವಾ ಸುಪ್ರೀಂ ಕೋರ್ಟ್ ಒಪ್ಪಿಗೆಯ ವಿಚಾರದಲ್ಲಾಗಲೀ ಒಟ್ಟಾರೆ ಈಗೇನು ಮುಖ್ಯ ನ್ಯಾಯಾಧೀಶರು ಸಮಿತಿಯೊಂದನ್ನು ಇದಕ್ಕಾಗಿ ರಚನೆ ಮಾಡಿದ್ದಾರೆ ಆ ಸಮಿತಿಯವರ ಜೊತೆ ಮುಖ್ಯಮಂತ್ರಿಗಳು ಚರ್ಚೆ ಮಾಡಿ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡಿಸಿ ಅಲ್ಲಿಯ ಜನರ ಮನೆಗೆ ನ್ಯಾಯ ತೀರ್ಮಾನಗಳು ತಲುಪುವ ಹಾಗೆ ಮಾಡಬೇಕು. ಇದೇ ಅಭಿಪ್ರಾಯವನ್ನು ಮಾನ್ಯ .ಮುಖ್ಯಮಂತ್ರಿಗಳೂ ಕೂಡ ಹೊಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಈ ವಿಚಾರದಲ್ಲಿ ದಿಟ್ಟ ನಿರ್ಣಯವನ್ನು ತೆಗೆದುಕೊಂಡು ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡಿ ಉತ್ತರ ಕರ್ನಾಟಕ ಜನತೆಯ ಆಶೋತ್ತರಗಳನ್ನು ಈಡೇರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

+ ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಪಕ್ಷಗಳ ನಾಯಕರುಗಳು ಮಾತನಾಡಿ ಉತ್ತರ ಕರ್ನಾಟಕ ಭಾಗದ ಜನತೆಯ ಬಹು ದಿನಗಳ ಬೇಡಿಕೆಯಾದ ಹೈಕೋರ್ಟ್ ನ್ಯಾಯಪೀಠವನ್ನು ಹುಬ್ಬಳ್ಳಿಯಲ್ಲಿ ಸ್ಥಾಪನೆ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಆ ಭಾಗದ ಅನೇಕರು ಈ ಬೇಡಿಕೆಯ ಈಡೇರಿಕೆಗಾಗಿ

ಉಪವಾಸ ಸತ್ಯಾಗ್ರಹ ಕುಳಿತಿದ್ದರು. ಉಪವಾಸ ಸತ್ಯಾಗ್ರಹಕ್ಕೆ ಮತ್ತು ಉತ್ತರ ಕರ್ನಾಟಕ ಭಾಗದ ಜನತೆಯ ಬೇಡಿಕೆಗೆ ಇಡೀ ಕರ್ನಾಟಕದಲ್ಲಿರುವ ಎಲ್ಲಾ ಬಾರ್ ಕೌನ್ಸಿಲ್‌ಗಳ ಅಧ್ಯಕ್ಷರಾದಿಯಾಗಿ ಎಲ್ಲರೂ ತಮ್ಮ ಬೆಂಬಲವನ್ನು ಸೂಚಿಸಿದ್ದರು. ಆಗ ಕೊನೆಯ ಘಟ್ಟದಲ್ಲಿ ನಾವೆಲ್ಲರೂ ಹೋಗಿ ಅವರ ಮನವೊಲಿಸಿ ಉಪವಾಸ ಸತ್ಯಾಗ್ರಹವನ್ನು ಕೈಬಿಡುವಂತೆ ಕೇಳಿಕೊಂಡಿದ್ದೆವು. ಆಗ ನಾವು ಹಾಗೆ ಮಾಡಿದ್ದರೆ ಇಡೀ ಕರ್ನಾಟಕದಲ್ಲಿ ಇದರಿಂದಾಗಿ ದೊಡ್ಡ ಸಮಸ್ಯೆಯೇ ಉದ್ಭವವಾಗುತ್ತಿತ್ತು. ಈಗಾಗಲೇ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮುಖ್ಯ ನ್ಯಾಯಾಧೀಶರು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿ ತಮ್ಮ ಕೆಲಸವನ್ನು ಪೂರೈಸಿದೆಯೆಂದು ತಿಳಿದುಬಂದಿದೆ. ಆದರೆ ಮುಂದಿನ ಕಾರ್ಯಗಳು ಎಲ್ಲಿಯವರೆಗೆ ಆಗಿದೆ ಎಂಬ ಬಗ್ಗೆ ನಮಗೆ ಗೊತ್ತಿಲ್ಲ. ಆ ಸಮಿತಿ ತನ್ನ ವರದಿಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೋ ಅಥವಾ ಮಾನ್ಯ ಕಾನೂನು ಸಚಿವರಿಗೋ ಕೊಟ್ಟಿರ ಬಹುದೇನೋ, ಆದರೆ ಆ ಬಗ್ಗೆ ಸ್ಪಷ್ಟವಾಗಿ ನಮಗೆ ಗೊತ್ತಿಲ್ಲ. ಆದರೆ ಉತ್ತರ ಕರ್ನಾಟಕದಲ್ಲಿ ಮತ್ತೆ ಹಿಂದೆ ಮಾಡಿದಂತೆ ಹೋರಾಟ ಮಾಡಲು ಕರೆ ನೀಡುವ ಸಂದರ್ಭವಿದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಆದುದರಿಂದ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ಮೂಲತಃ ತಾವು ದಕ್ಷಿಣ ಕರ್ನಾಟಕದವರು ಎನ್ನುವ ಭಾವನೆ ಎಲ್ಲರಲ್ಲೂ ಇದೆ, ತಾವು ಇಡೀ ಕರ್ನಾಟಕ ಜನತೆಯ ಹಿತದೃಷ್ಟಿಯಿಂದ ಬಹಳ ಮುಖ್ಯವಾಗಿ ಉತ್ತರ ಕರ್ನಾಟಕದ ಜನತೆಯ ಬಹಳ ದಿನಗಳ ಆಸೆಯಾದ ಹೈಕೋರ್ಟ್ ನ್ಯಾಯ ಪೀಠವನ್ನು ಪೂರೈಸಿ ಕೊಡುವುದರಲ್ಲಿ ಅಗ್ರ ಪಾತ್ರವನ್ನು ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ತಾವು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿ ಮಾತನಾಡಿ ಇದರ ಬಗ್ಗೆ ವಿವರವಾಗಿ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಇದಕ್ಕಾಗಿ ಮತ್ತೆ ಹೋರಾಟ ಮಾಡಲು ಜನರಿಗೆ ಕರೆ ಕೊಡುವಂತಹ ಸನ್ನಿವೇಶ ಬಂದಿದೆ. ಆ ರೀತಿ ಮತ್ತೆ ಕರೆ ಕೊಟ್ಟರೆ ಹೆಚ್ಚು ತೊಂದರೆಯಾಗುತ್ತದೆ. ಈ ಸನ್ನಿವೇಶ ಬರದಂತೆ ಮಾಡಲು ಆದಷ್ಟು ಬೇಗ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ ವರದಿ ಪಡೆದುಕೊಂಡು ಉತ್ತರ ಕರ್ನಾಟಕದ ಜನತೆಯ ಬಹು ದಿನಗಳ ಬೇಡಿಕೆಯನ್ನು ಈಡೇರಿಸಿ ಒಳ್ಳೆಯ ಹೆಸರನ್ನು ಗಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುತ್ತೇನೆ.

+ ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಅಧ್ಯಕ್ಷರೆ, ಕೇವಲ ಆ ಭಾಗದ ಜನರ ಬೇಡಿಕೆ ಇದೆ ಎನ್ನುವ ವಾದಕ್ಕೆ ಆ ಭಾಗದಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಕೊಡಬೇಕೆಂದು ನಾನು ಕೇಳುತ್ತಿಲ್ಲ. ಈಗಾಗಲೇ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರತಕ್ಕಂಥ ಕೇಸ್‌ಗಳ ದಾಖಲೆಯನ್ನು ತಾವು ನೋಡಿದರೆ ತಮಗೆ ಅದು ಗೊತ್ತಾಗುತ್ತದೆ. ಹೈಕೋರ್ಟ್‌ನಲ್ಲಿರುವ ಕೇಸ್‌ಗಳಲ್ಲಿ 100ಕ್ಕೆ 80 ರಷ್ಟು ಉತ್ತರ ಕರ್ನಾಟಕದ್ದಾದರೆ ಇನ್ನುಳಿದ 20 ರಷ್ಟು ಕೇಸ್‌ಗಳು ದಕ್ಷಿಣ ಕನ್ನಡ ಭಾಗಕ್ಕೆ ಸೇರಿದವುಗಳಾಗಿರುತ್ತದೆ. ದೂರ-ದೂರದಿಂದ ಬರುವ ಲಿಟಿಗೆಂಟ್ಸ್‌ಗಳು ಬಹಳ ವರ್ಷಗಳಿಂದ ತೊಂದರೆಯನ್ನು ಪಡುತ್ತಿದ್ದಾರೆ. ಆದುದರಿಂದ ಉತ್ತರ ಕರ್ನಾಟಕದಿಂದ ಬರುವ ಲಿಟಿಗೆಂಟ್ಸ್‌ಗಳ ಹಿತದೃಷ್ಟಿಯಿಂದ ಹಾಗೂ ಆ ಭಾಗದ ಜನತೆಯ ಬೇಡಿಕೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು

ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡಬೇಕಾದ ಅವಶ್ಯಕತೆ ಇದೆ. ಅನೇಕ ವರ್ಷಗಳಿಂದ ಇದನ್ನು "ಮಾಡುತ್ತೇವೆ, ಮಾಡುತ್ತೇವೆ" ಎಂದು ಹೇಳುತ್ತಲೇ ಬರುತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳೂ ಕೂಡ ಹೀಗೆ ಹೇಳಿದ್ದರು. ಆದರೆ ನನಗೆ ತಿಳಿದ ಹಾಗೆ ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ. ಕೃಷ್ಣರವರು ಹುಬ್ಬಳ್ಳಿಯಲ್ಲಿ ಹೈಕೋರ್ಟ್ ನ್ಯಾಯ ಪೀಠವನ್ನು ಸ್ಥಾಪನೆ ಮಾಡಿಸುತ್ತಾರೆನ್ನುವ ವಿಶ್ವಾಸ ನನಗಿದೆ. ಏಕೆಂದರೆ ಹಿಂದೆ ಅನೇಕ ಬಾರಿ ಹುಬ್ಬಳ್ಳಿಯಲ್ಲಿ ಈ ವಿಚಾರದಲ್ಲಿ ನ್ಯಾಯವಾದಿಗಳು ಮುಷ್ಕರ ಮಾಡಿ ಉಪವಾಸ ಸತ್ಯಾಗ್ರಹ ಮಾಡಿದಾಗ ಎಸ್.ಎಂ. ಕೃಷ್ಣರವರು ಸ್ವತಃ ಅವರನ್ನು ಭೇಟಿ ಮಾಡಿದ್ದಾರೆ. ಅಲ್ಲಿ ಅವರಿಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಸ್ವಲ್ಪ ಬಿಡುವು ಮಾಡಿಕೊಂಡು ಮುಖ್ಯ ನ್ಯಾಯಾಧೀಶರೊಡನೆ ಚರ್ಚೆ ಮಾಡಿ ಆದಷ್ಟು ಬೇಗ ಆ ವರದಿಯನ್ನು ತರಿಸಿಕೊಳ್ಳಬೇಕು. ರಾಜ್ಯ ಸರ್ಕಾರ ಈ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ ಅತೀ ಶೀಘ್ರವಾಗಿ ಈ ನ್ಯಾಯಾಲಯ ಪೀಠ ಸ್ಥಾಪನೆಯಾಗುತ್ತದೆ. ಈ ಬಗ್ಗೆ ಉತ್ತರ ಕರ್ನಾಟಕದ ಸಮಗ್ರ ಜನತೆಯ ಪರವಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಭಾಗ ಅನೇಕ ವಿಚಾರಗಳಲ್ಲಿ ಹಿಂದುಳಿದಿದೆ ಎನ್ನುವಂತಹ ಕೂಗು ಅನೇಕ ವರ್ಷಗಳಿಂದ ಇದ್ದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಒಂದು ದಿಟ್ಟವಾದಂತಹ ಹೆಜ್ಜೆಯನ್ನಿಟ್ಟು, ಅಧಿಕಾರ ವಿಕೇಂದ್ರೀ ಕರಣದ ಹಿನ್ನಲೆಯಲ್ಲಿ ಆನೇಕ ದೊಡ್ಡ ದೊಡ್ಡ ಜಿಲ್ಲೆಗಳನ್ನು ವಿಂಗಡನೆ ಮಾಡಿದರು. ಉತ್ತರ ಕರ್ನಾಟಕದ ಅತೀ ದೊಡ್ಡ ಜಿಲ್ಲೆ ಬಾಗಲಕೋಟೆ, ಬಿಜಾಪುರ ಎಂದು ಎರಡು ಜಿಲ್ಲೆಗಳನ್ನಾಗಿ ವಿಂಗಡನೆ ಮಾಡಿದ್ದಾರೆ. ಈ ಒಂದು ಪ್ರಾಮಾಣಿಕವಾದಂತಹ ಪ್ರಯತ್ನದಲ್ಲಿ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕೆನ್ನುವಂತಹ ಒಂದು ಬೇಡಿಕೆಯನ್ನು ಇಟ್ಟಾಗ ಅಲ್ಲಿ ಸತ್ಯಾಗ್ರಹವಾಗುವಂತಹ ಸಂದರ್ಭ ಬಂತು. ಆಗ ಹಿಂದಿನ ಸರ್ಕಾರ ಪ್ರಾಮಾಣಿಕವಾದ ಸ್ಪಂದನೆಯನ್ನು ಮಾಡಿತು, ಆಡಳಿತ ಪಕ್ಷದಲ್ಲಿ ಇಂದು ಕುಳಿತಿರುವಂತಹ ಅನೇಕ ಹಿರಿಯ ನಾಯಕರು ಸತ್ಯಾಗ್ರಹ ನಡೆದಂತಹ ಸ್ಥಳಕ್ಕೆ ಬೇಟಿ ಕೊಟ್ಟಿದ್ದರು. ಯಾವುದೇ ಪರಿಸ್ಥಿತಿಯಲ್ಲಿ ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಹೈಕೋರ್ಟ್ ನ್ಯಾಯ ಪೀಠ ಆಗಬೇಕೆಂದು ಒತ್ತಾಯ ಮಾಡಿದರು. ಈ ಹಿನ್ನಲೆಯಲ್ಲಿ ಹೈಕೋರ್ಟ್‌ನವರು ಕೂಡ ಒಂದು ಅಭ್ಯಾಸ ಸಮಿತಿಯನ್ನು ರಚನೆ ಮಾಡಿದರು. ಇವತ್ತು ಸಾವಿರಾರು ಕೇಸ್‌ಗಳು ಪೆಂಡಿಂಗ್ ಇವೆ, ಇದು ಏಕೆ ಎಂದು ವಿಚಾರ ಮಾಡಿದಾಗ, ಉತ್ತರ ಕರ್ನಾಟಕದಿಂದ ಬರುವಂತಹ ಕಕ್ಷಿದಾರರು ಪದೇ ಪದೇ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಅವರು ಇಲ್ಲಿಗೆ ಬರುವುದಕ್ಕೆ ಹಣ ವ್ಯಯವಾಗುತ್ತದೆ, ಸಮಯವೂ ವ್ಯಯವಾಗುತ್ತದೆ, ಮೊಕದ್ದಮೆ ಹೂಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಷಯಗಳನ್ನು ತಾವು ಗಮನಿಸಬೇಕು. ಈ ಹಿನ್ನಲೆಯಲ್ಲಿ ಜನತೆಯ ಮನೆಯ ಬಾಗಿಲಿಗೆ ನ್ಯಾಯ ತಕ್ಷಣವೇ ದೊರೆಯಬೇಕು. ಅದು ಅತೀ ಕಡಿಮೆ ಖರ್ಚಿನಲ್ಲಿ ದೊರೆಯಬೇಕೆನ್ನುವ ಚಿಂತನೆಯನ್ನು ಸರ್ಕಾರ ಮಾಡಬೇಕು. ಇವತ್ತು ಈ ಹೈಕೋರ್ಟ್ ಪೀಠ

ಸ್ಥಾಪನೆಯ ವಿಚಾರವೇನು ಇದೆ, ಅದರ ಬಗ್ಗೆ ಸನ್ಮಾನ್ಯ ಸಭಾನಾಯಕರು ಗಮನಹರಿಸಬೇಕು, ಮತ್ತೊಮ್ಮೆ ಅಲ್ಲಿ ಅಹಿತಕರವಾದ ಘಟನೆಯಾಗದ ಹಾಗೆ ಆ ಭಾಗದ ವಕೀಲರು ಸತ್ಯಾಗ್ರಹ ಮಾಡುವುದಕ್ಕಿಂತ ಮುಂಚೆ ಅವರಿಗೆ ಖಚಿತವಾದಂತಹ, ಸ್ಪಷ್ಟವಾದಂತಹ ಭರವಸೆಯನ್ನು ಕೊಡುವ ದಿಶೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಆಸಕ್ತಿಯನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರನ್ನು ಬೇಟಿ ಮಾಡಿ ಮಾತನಾಡಿದ ಮೇಲೆ ನಮಗೆ ಒಂದು ಭರವಸೆಯನ್ನು ಕೊಡಬೇಕು. ನಮ್ಮ ನಾಯಕರಾದ ಶ್ರೀ ಮಾಲೀಕಯ್ಯ ಗುತ್ತೇದಾರ್‌ರವರು ಹೇಳಿದಂತೆ ಉತ್ತರ ಕರ್ನಾಟಕದ ಮುಖ್ಯವಾದ ಸ್ಥಳದಲ್ಲಿ ಅದು ಗುಲ್ಬರ್ಗಾದಲ್ಲಾಗಲೀ, ಬಿಜಾಪುರದಲ್ಲಾಗಲೀ, ಹುಬ್ಬಳ್ಳಿಯಲ್ಲಾಗಲೀ, ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕು. ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ನ್ಯಾಯ ಪೀಠವಾಗುವಂತೆ ಸೂಚನೆ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ, ಮಾನ್ಯ ಸಭಾನಾಯಕರಲ್ಲೂ ಕೂಡ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ವಿಚಾರದಲ್ಲಿ ಹೇಳಿಕೆ ನೀಡಲು ಮಾನ್ಯ ಕಾನೂನು ಸಚಿವರು ಬರಬೇಕೆಂದು ಹೇಳಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧಕ್ಷರೆ, ನಾವೆಲ್ಲರೂ ಕೇಳುವಂಥಾದ್ದು ಏನೆಂದರೆ ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ಉತ್ತರ ಹೇಳಿದರೆ ಸಾಕು. ಇದಕ್ಕೆ ಮಾನ್ಯ ಕಾನೂನು ಸಚಿವರೇ ಬರಬೇಕೆಂದು ಏನಿಲ್ಲ. ತಾವೇ ಮುಖ್ಯ ನ್ಯಾಯಾಧೀಶರನ್ನು ಈ ಬಗ್ಗೆ ವರದಿ ಕೊಡಲು ಏಕೆ ತಡವಾಗಿದೆ ಎಂದು ಕೇಳಬಹುದು.

ಶ್ರೀ ಎಸ್.ಎಂ. ಕೃಷ್ಣ : ಈಗ ತಾವು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಹೆಚ್ಚು ಮಾಹಿತಿಗಳನ್ನು ಕಲೆಕ್ಟ್ ಮಾಡಿ ಮಾನ್ಯ ಕಾನೂನು ಸಚಿವರು ಮುಂದಿನ ವಾರ ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಇವತ್ತು ಸಾಯಂಕಾಲದೊಳಗೆ ಹೇಳಿಕೆ ಕೊಡಿ, ಏಕೆಂದರೆ ಅಲ್ಲಿ 27ನೇ ತಾರೀಖಿನಂದು ಸತ್ಯಾಗ್ರಹ ಮಾಡಬೇಕೆಂದು ಇದ್ದಾರೆ.

ಶ್ರೀ ಎಸ್.ಎಂ. ಕೃಷ್ಣ : ನೋಡೋಣ, ಮಾನ್ಯ ಕಾನೂನು ಸಚಿವರು ಮೇಲ್ಮನೆಯಲ್ಲಿದ್ದಾರೆ, ಅವರಿಗೆ ಹೇಳಿ ಕಳುಹಿಸುತ್ತೇನೆ. ಅವರು ಬಂದ ತಕ್ಷಣ ಹೇಳಿಕೆ ಕೊಡಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಕೇಳುವಂಥಾದ್ದು ಮಾನ್ಯ ಮುಖ್ಯಮಂತ್ರಿಯವರು ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಬೇಕೆಂದು ಹೇಳಿದ್ದೇವೆ. ಅವರೇ ನೇರವಾಗಿ ಈ ವಿಷಯವನ್ನು ಹೇಳಿದರೆ ಮುಗಿಯುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ನಾವು ಅನೇಕ ವಿಷಯಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳ ಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹಿಂದಿನ ಮುಖ್ಯಮಂತ್ರಿಯವರು ಸುಪ್ರೀಂ ಕೋರ್ಟ್ ಭೇಟಿಯಾಗುವಂಥಾದೆಲ್ಲವನ್ನು ಮಾಡಿದ್ದಾರೆ. ಈಗ ಹೈಕೋರ್ಟ್ ಪೀಠವನ್ನು ಮಾಡುತ್ತೀರೊ, ಇಲ್ಲವೊ, ಎಂದು ಹೇಳಬೇಕಷ್ಟೆ, ಇದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಹಿಂದಿನ ಮಾನ್ಯ ಮುಖ್ಯಮಂತ್ರಿಯವರು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿದ್ದಾರೆ, ಹಿಂದಿನ ಮಾನ್ಯ ಕಾನೂನು ಸಚಿವರು ಅವರ ಜೊತೆಗೆ ಇದ್ದರು. ಆಗ ಅದು ಒಂದು ಹಂತಕ್ಕೆ ಬಂದು, ಅದರ ಪ್ರಕ್ರಿಯೆ ನಿಂತು ಹೋಗಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು, ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚನೆ ಮಾಡಿದರೆ ಇದರಿಂದ ಒಂದು ಫಲಿತಾಂಶವನ್ನು ನಿರೀಕ್ಷೆ ಮಾಡಬಹುದು. ಈ ಕೆಲಸವಾಗಲಿಲ್ಲವೆಂದರೆ ಸರ್ಕಾರದವರು ಇಲ್ಲೇ ಕುಳಿತರೆ, ಮುಖ್ಯ ನ್ಯಾಯಾಧೀಶರು ಅಲ್ಲೆ ಕುಳಿತಿರುತ್ತಾರೆ, ಹೈಕೋರ್ಟ್ ಪೀಠ ಸ್ಥಾಪನೆ ವಿಚಾರ ಅಲ್ಲೇ ಇರುತ್ತದೆ. ನಾವು ಇಲ್ಲೇ ಇರುತ್ತೇವೆ. ಇದು ಯಾವುದು ಪ್ರೋಗ್ರೆಸ್ ಆಗುವುದಿಲ್ಲ. ಈ ಒಂದು ವರ್ಷದಿಂದ ಏನು ಪ್ರೋಗ್ರೆಸ್ ಆಗಿಲ್ಲ, ಮತ್ತೆ ಅದೇ ಆಗಬಾರದೆಂದು ನಾವು ಹೇಳುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಈ ಸಮಿತಿಯನ್ನು ರಚನೆ ಮಾಡಿ ಐದು ತಿಂಗಳುಗಳಾಗಿದೆ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಯವರು ಕಾನೂನು ಸಚಿವರೊಡನೆ ಸಮಲೋಚನೆ ಮಾಡಿ ಸ್ಟೇಟ್‌ಮೆಂಟ್ ಕೊಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಕಾನೂನು ಸಚಿವರ ಹೇಳಿಕೆಯನ್ನು ಕೇಳುತ್ತಿಲ್ಲ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಇದರ ಬಗ್ಗೆ ಅವರೇ ಹೇಳಬೇಕೆಂದು ಕೇಳಿದ್ದೇವೆ.

ಅಧ್ಯಕ್ಷರು : ಲೇಟೆಸ್ಟ್ ಪೊಸಿಷನ್ ಏನು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕಾನೂನು ಸಚಿವರೊಡನೆ ಸಮಾಲೋಚನೆ ಮಾಡಿ ಒಂದು ಹೇಳಿಕೆಯನ್ನು ಕೊಡಿಸುತ್ತೇನೆಂದು ಹೇಳಿದ್ದಾರಲ್ಲಾ...

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಕೊಡುವಂತಹ ಸ್ಟೇಟ್‌ಮೆಂಟ್ ಬೇರೆ; ಈಗ ನಾವು ಮಾನ್ಯ ಮುಖ್ಯಮಂತ್ರಿಯವರನ್ನು ನೇರವಾಗಿ ಕೇಳಿದ್ದೇವೆ, ಈಗ ಅವರು ಸದನದಲ್ಲಿದ್ದಾರೆ, ಅವರು ಮಾಡುವಂತಹ ಕೆಲಸವನ್ನು ಕೇಳುತ್ತಿದ್ದೇನೆ. ತಾವು ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಲು ಹೋಗಿದ್ದಿರೊ, ಇಲ್ಲವೊ ಎಂಬುದನ್ನು ಹೇಳಬೇಕು. ಅಧ್ಯಕ್ಷರೇ, ತಾವು ಆದೇಶ ನೀಡಬೇಕು. ಸಭೆಯಲ್ಲಿ ಮಾನ್ಯ ಸಭಾನಾಯಕರು ಇಲ್ಲದಿದ್ದ ಪಕ್ಷದಲ್ಲಿ ಗೃಹ ಮಂತ್ರಿಯವರಾಗಲಿ ಅಥವಾ ಯಾವುದಾದರೂ ಖಾತೆಯ ಮಂತ್ರಿಗಳು ಹೇಳಬಹುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವಂತಹ ವಿಚಾರ ಬಹಳ ಮುಖ್ಯವಾದಂತಹ ಭಾವನಾತ್ಮಕವಾದಂತಹ ವಿಚಾರವಾಗಿದೆ, sentiments are more important according to me. ಉತ್ತರ ಕರ್ನಾಟಕದ ಜನರಿಗೆ, ನಮ್ಮನ್ನು ಎಲ್ಲಾ ವಿಚಾರಗಳಲ್ಲೂ ಸರ್ಕಾರ ಕಡೆಗಣಿಸಿದೆ. ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತಲಿರುವಂತಹ ಜನ ನಮ್ಮನ್ನು ಎಲ್ಲಕ್ಕೂ ನೆಗ್ಲೆಟ್ ಮತ್ತು ಇಗ್ನೋರ್ ಮಾಡುತ್ತಾರೆಂಬ ಭಾವನೆ ಬರುತ್ತಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರೇ, ತಾವು ಈ ಸಭೆಯಲ್ಲಿ ಇದ್ದೀರಿ. ತಾವು ಒಂದು ಹೇಳಿಕೆಯನ್ನು ಕೊಡದಿದ್ದರೆ this itself will give a wrong signal there. ತಾವು ಮಾಡಿದ್ದೀರಾ ಎಂಬ ವಿಶ್ವಾಸ ನಮಗಿದೆ, ತಾವು ಅದನ್ನು ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ವಿಷಯ ಚರ್ಚೆಯಾಗಿದ್ದು ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿದ್ದಾರೆ. ಈಗ ಮಾನ್ಯ ಕಾನೂನು ಸಚಿವರು ಹೇಳಿಕೆಯನ್ನು ಕೊಡುತ್ತಾರೆಂದು ಹೇಳಿದರೆ ಇದರಿಂದ ಜನರಿಗೆ ಸ್ಪಷ್ಟವಾದ ಸಂದೇಶ ಹೋಗುವುದಿಲ್ಲ. ಸರ್ಕಾರ ಈಗಾಗಲೇ ಹೈಕೋರ್ಟ್ ಪೀಠವನ್ನು ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣವನ್ನು ಕೊಡದಿದ್ದರೆ, ವಿಷಯವನ್ನು ಅವರು ಇಲ್ಲಿ ಪ್ರಸ್ತಾಪ ಮಾಡದೆ ಹೋದರೆ ಜನಗಳ ಭಾವನೆಗೆ ಧಕ್ಕೆಯಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟ ಮಾಡಬೇಕು; ಈ ದಿಶೆಯಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆನ್ನುವಂತಹ ಮಾತನ್ನು ಈ ಸದನದ ಮೂಲಕ ಹೇಳಿದರೆ ನೊಂದ ಜನರಿಗೂ ಸಮಾಧಾನವಾಗುತ್ತದೆ. ಈಗಾಗಲೇ ಸಾಕಷ್ಟು ವಿಳಂಬವಾಗಿದೆ, ಪ್ರತಿಯೊಬ್ಬರ ಮನಸ್ಸಿನಲ್ಲೂ ಉತ್ತರ ಕರ್ನಾಟಕವನ್ನು ಮಲತಾಯಿ ಧೋರಣೆಯಿಂದ ನೋಡುತ್ತಾರೆಂಬ ಭಾವನೆ ಎಲ್ಲರಲ್ಲಿ ಬಂದಿದೆ. ಆದುದರಿಂದ ತಾವು ಈ ಭಾವನೆಯನ್ನು ದೂರ ಮಾಡಿ ಹೈಕೋರ್ಟ್ ಪೀಠವನ್ನು ಕೂಡಲೇ ಮಾಡುತ್ತೇವೆನ್ನುವ ಮಾತನ್ನು ಸದನದಲ್ಲಿ ಹೇಳಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಈಗ ಸಭೆಯಲ್ಲಿ ಪ್ರಸ್ತಾಪವಾದಂತಹ ವಿಚಾರ ಉಚ್ಚ ನ್ಯಾಯಾಲಯದ ವ್ಯಾಪ್ತಿಯನ್ನು ಒಳಗೊಂಡಂತಹ ವಿಚಾರವಾಗಿದೆ. ಆದುದರಿಂದ ಈ ವಿಷಯವಾಗಿ ಹೆಚ್ಚು ಮಾಹಿತಿಗಳನ್ನು ಸಂಗ್ರಹಣೆ ಮಾಡಿ ಅನಂತರ ಒಂದು ಅರ್ಥಪೂರ್ಣವಾದಂತಹ ಹೇಳಿಕೆಯನ್ನು ಮಾಡಬೇಕು. ಆ ಒಂದು ಉದ್ದೇಶದಿಂದ ನಾನು ಹಿಂಜರಿದಿದ್ದೇನೇ ಹೊರತು, ತಾವು ಹೇಳಿದಂತೆ ಪ್ರಸ್ತಾಪ ಮಾಡಿರುವಂತಹ ಘಟನೆಯ ಮಹತ್ವವನ್ನು ಯಾವ ದೃಷ್ಟಿಯಿಂದಲೂ ಕೂಡ ಅದನ್ನು ಹಗುರವಾಗಿ ತೆಗೆದುಕೊಳ್ಳಬೇಕೆಂದು ಅಲ್ಲ. ಕಳೆದ ಸರ್ಕಾರ ಈ ದಿಶೆಯಲ್ಲಿ ಬಹಳ ಪ್ರಯತ್ನ ಮಾಡುವಂಥಾದ್ದು ನನ್ನ ಗಮನಕ್ಕೆ ಬಂದಿದೆ. ಆ ವಿಚಾರವನ್ನು ತಾವೇ ಪ್ರಸ್ತಾಪ ಮಾಡಿದ್ದೀರಿ, ಮಾನ್ಯ ವಿರೋಧಪಕ್ಷದ ನಾಯಕರು ಸಹ ಐದು ಮಂದಿಯನ್ನೊಳಗೊಂಡ ಒಂದು ಸಮಿತಿಯನ್ನು ಮುಖ್ಯ ನ್ಯಾಯಾಧೀಶರು ಮಾಡಿದ್ದಾರೆಂದು ಹೇಳಿದ್ದಾರೆ. ಈಗ ಇದು ಯಾವ ಹಂತದಲ್ಲಿದೆ

ಎನ್ನುವುದರ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇಲ್ಲ. ಅವರು ಎಷ್ಟು ಮಿಟಿಂಗ್‌ಗಳನ್ನು ಮಾಡಿದ್ದಾರೆಂದು ನಮಗೆ ಹೇಳಬೇಕಾದುದು ಇಲ್ಲ, ಇದು ಶ್ರೇಷ್ಠನ್ಯಾಯಾಲಯದ ವ್ಯಾಪ್ತಿಗೆ ಸೇರಿದ ವಿಚಾರ. ಪ್ರಾಸ್ತಾವಿಕವಾಗಿ ಈ ವಿಚಾರದಲ್ಲಿ ನಾನು ಹಾಗೂ ಮುಖ್ಯ ನ್ಯಾಯಾಧೀಶರು ಭೇಟಿಯಾದಂತಹ ಕಾಲದಲ್ಲಿ ಈ ವಿಚಾರ ಪ್ರಸ್ತಾಪವನ್ನು ಸರ್ಕಾರದ ಪರವಾಗಿ ಮಾಡಿದ್ದೇವೆ, ಹಿಂದಿನ ಸರ್ಕಾರ ಏನು ಮಾಡಿತು ಅದನ್ನು ಮುಂದುವರೆಸಿದ್ದೇವೆ. ಈ ಮಧ್ಯೆ ಹುಬ್ಬಳ್ಳಿ ಭಾಗದಿಂದ ಬಂದಿರುವ ಹಾಗೂ ಅಲ್ಲಿಂದ ಬಂದಿರುವ ವಕೀಲರ ಸಂಘ ಈಗ ಮತ್ತೆ ಚಳುವಳಿಯ ಪ್ರಸ್ತಾಪವನ್ನು ಮಾಡಿದ್ದಾರೆ. ಆದಕ್ಕೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಮತ್ತೆ ರಾಜ್ಯದ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ; ಅನಂತರ, ದೇಶದ ಸರ್ವೋಚ್ಚ ನ್ಯಾಯಾಧೀಶರನ್ನು ಕೂಡ ಭೇಟಿ ಮಾಡಬೇಕೆಂದು ಮಾನ್ಯ ಎಸ್.ಎಸ್. ಪಾಟೀಲ್‌ರವರು ಏನು ಸಲಹೆಯನ್ನು ಮಾಡಿದ್ದಾರೆ ಅದರಂತೆ ಅನುಕೂಲವಾಗುತ್ತದೆಂದು ಕಂಡು ಬಂದಲ್ಲಿ ಅಗತ್ಯಬಿದ್ದಲ್ಲಿ ಅವರನ್ನು ಕೂಡ ಭೇಟಿ ಮಾಡುತ್ತೇವೆ. ಇದರ ಜೊತೆಗೆ ಕೇಂದ್ರ ಕಾನೂನು ಸಚಿವರ ಪಾತ್ರವು ಕೂಡ ಇರುವುದರಿಂದ ಅವರನ್ನು ಕೂಡ ಭೇಟಿ ಮಾಡುವ ಪ್ರಸಂಗ ಬರುತ್ತದೆ. ಆದುದರಿಂದ ಅಲ್ಲಿ ಏನು ಭಾವನಾತ್ಮಕ ಬೆಳವಣಿಗೆಗಳು ಸೆಂಟಿಮೆಂಟಲ್ ರೀಸನ್ಸ್ ನಡೆದಿವೆ ಅದಕ್ಕೆ ನಾವು ಸ್ಪಂಧಿಸುತ್ತಿದ್ದೇವೆ, ಆದ್ದರಿಂದ ಚಳುವಳಿಯ ಮಾರ್ಗವನ್ನು ಬಿಡಬೇಕು, ನಾವು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ಬೇಟಿ ಮಾಡಿ ಈ ಬಗ್ಗೆ ಮಾತನಾಡಿ, ಆನಂತರ ಒಂದು ಸರ್ವಸಮ್ಮತವಾದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ನಾವೆಲ್ಲರೂ ಒಟ್ಟಿಗೆ ಸೇರಿ ಪ್ರಯತ್ನ ಮಾಡೋಣ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಡಾ|| ಎ.ಬಿ. ಮಾಲಿಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಸರ್ಕಾರೀ ಆಸ್ಪತ್ರೆಗಳಲ್ಲಿ 14 ಐ.ವಿ. ಫ್ಲೂಯಿಡ್ ಘಟಕಗಳಿಂದ ತಯಾರಾದ ಐ.ವಿ. ದ್ರಾವಣವನ್ನು ಅಲ್ಲಿನ ಆಸ್ಪತ್ರೆಗಳಲ್ಲಿ ಹಾಗೂ ಹತ್ತಿರದ ಸರ್ಕಾರೀ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿತ್ತು.

ಭಾರತ ಸರ್ಕಾರ 26ನೇ ಫೆಬ್ರವರಿ 1993ರಲ್ಲಿ ಔಷಧ ಮತ್ತು ಕಾಂತಿವರ್ದಕಗಳ ನಿಯಮಗಳಿಗೆ ತಿದ್ದುಪಡಿಯನ್ನು ತಂದು ರಾಜ್ಯ ಪರವಾನಗಿ ಪ್ರಾಧಿಕಾರ ಐ.ವಿ. ಘಟಕಗಳಿಗೆ ಕೊಡುವ ಪರವಾನಗಿಯನ್ನು ಕೇಂದ್ರ ಸರ್ಕಾರ ಪರವಾನಗಿ ಪ್ರಾಧಿಕಾರ ಅನುಮೋದನೆ ಗೊಳಪಡಿಸಬೇಕೆಂದು ಕಡ್ಡಾಯಪಡಿಸಿತು. ಉತ್ತಮ ತಯಾರಿಕಾ ವಿಧಾನಗಳನ್ನು (Good Manufacturing Practices) ಅಳವಡಿಸಲು ಈ ನಿಟ್ಟಿನಲ್ಲಿ ತಯಾರಿಕಾ ಆವರಣ, ತಾಂತ್ರಿಕ ನಿಪುಣತೆ, ಕಚ್ಚಾ ವಸ್ತು, ತಯಾರಿಕಾ ವಿಧಾನ,ತಯಾರಿಸಿದ ಔಷಧವನ್ನು ವಿಶ್ಲೇಷಿಸಲು ಬೇಕಾದ ಸವಲತ್ತುಗಳನ್ನು ಪೂರೈಸಬೇಕಾಗಿತ್ತು. ಐ.ವಿ.ದ್ರಾವಣವನ್ನು ನೇರವಾಗಿ ರಕ್ತನಾಳಗಳಿಗೆ ಕೊಡುವುದರಿಂದ ಇವುಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕಾಗಿರುವುದು, ಬಹುಮುಖ್ಯ ಆದ್ದುದರಿಂದ Good Manufacturing Practices ತಯಾರಿಕೆಯ ಪ್ರತಿಯೊಂದು ಹಂತದಲ್ಲಿಯೂ ಅಳವಡಿಸಬೇಕಾಗಿರುತ್ತದೆ.

ಈ ರೀತಿ ಪರವಾನಗಿ ಪಡೆಯಲು ಔಷಧ ಮತ್ತು ಕಾಂತಿವರ್ಧಕಗಳ ಅಂದರೆ ಕಾಸ್ಮೆಟಿಕ್ಸ್ ಕಾಯಿದೆ ಮತ್ತು ನಿಯಮಗಳಡಿಯಲ್ಲಿ ನಿಗಧಿಪಡಿಸಿರುವ ತಯಾರಿಕಾ ಆವರಣ, ತಾಂತ್ರಿಕ ನಿಪುಣತೆ, ಕಚ್ಚಾ ವಸ್ತು ಮತ್ತು ತಯಾರಾದ ಔಷಧಗಳನ್ನು ವಿಶ್ಲೇಷಿಸಲು ಬೇಕಾದ ಸವಲತ್ತುಗಳು ಹಾಗೂ Good Manufacturing Practices ಷರತ್ತುಗಳನ್ನು ಪೂರೈಸಿಲ್ಲದ ಕಾರಣ ಈ ಘಟಕಗಳ ಪರವಾನಗಿಯನ್ನು ಔಷಧ ನಿಯಂತ್ರಣ ಇಲಾಖೆ ಮಂಜೂರು ಮಾಡಲಿಲ್ಲ ಅಥವ ನವೀಕರಿಸಲಿಲ್ಲ.

ನ್ಯಾಷನಲ್ ಹ್ಯೂಮನ್ ರೈಟ್ ಕಮಿಷನ್ ರವರ 31-3-99ರ ಆದೇಶದ ಪ್ರಕಾರ, ಔಷಧ ಮತ್ತು ಕಾಂತಿವರ್ಧಕ ಕಾಯಿದೆ ಮತ್ತು ನಿಯಮಾವಳಿಗಳ ಪ್ರಕಾರ ಸವಲತ್ತುಗಳನ್ನು ಒದಗಿಸದೆ ಇರುವ ಘಟಕಗಳಲ್ಲಿ 31-12-1999ರ ನಂತರ ಪರವಾನಗಿ ಇಲ್ಲದ ಅಥವ ನವೀಕರಿಸದ ಘಟತಗಳಲ್ಲಿ ಐ.ವಿ. ದ್ರಾವಣಗಳನ್ನು ತಯಾರಿಸದಂತೆ ನಿಗಾ ವಹಿಸಬೇಕೆಂಬ ಮತ್ತು ಐ.ವಿ. ದ್ರಾವಣದ ತಯಾರಿಕೆಗೆ ಭಾರತ ಸರ್ಕಾರ ವಿಧಿಸಿರುವ ನಿಯಮಗಳನ್ನು ಪೂರೈಸುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಯಿತು.

ಇದೊಂದೇ ಅಲ್ಲದೆ ಈ ಘಟಕಗಳಿಂದ ತಯಾರಾಗುತ್ತಿದ್ದ ದ್ರಾವಣದ ವೆಚ್ಚ ಮಾರುಕಟ್ಟೆಯಲ್ಲಿ ಲಭ್ಯವಿರುವ ದ್ರಾವಣ ಬೆಲೆಗಿಂತಲೂ ಅತಿ ಹೆಚ್ಚು . ಭಾರತ ಸರ್ಕಾರ ಔಷಧ ಮತ್ತು ಕಾಂತಿವರ್ಧಕ ಕಾಯಿದೆ ಮತ್ತು ನಿಯಮಾವಳಿಗಳಿಗೆ ಸಧ್ಯದಲ್ಲೇ ಒಂದು ತಿದ್ದುಪಡಿಯನ್ನು ತರಲಿದ್ದು, ಅದರ ಪ್ರಕಾರ ಐ.ವಿ. ದ್ರಾವಣಗಳನ್ನು ತುಂಬಲು ಉಪಯೋಗಿಸುವ ಶೀಷೆಗಳನ್ನು ಮರುಬಳಸುವಂತಿಲ್ಲ. ಈಗಾಗಲೇ ಭಾರತ ಸರ್ಕಾರ ಕರಡು ತಿದ್ದುಪಡಿಯ ಸೂಚನೆ ಹೊರಡಿಸಿದೆ (11-10-1999). ಇದು ಜಾರಿಗೆ ಬಂದರೆ ಈ ಶೀಷೆಗಳನ್ನು ಮರುಬಳಸುವುದಿಲ್ಲವಾದ್ದರಿಂದ ತಯಾರಿಕಾ ವೆಚ್ಚವು ಇನ್ನೂ ಜಾಸ್ತಿಯಾಗುತ್ತದೆ. ಹಾಗೂ ಈ ಐ.ವಿ. ತಯಾರಿಕಾ ಘಟಕಗಳನ್ನು Good Manufacturing Practices ಪ್ರಕಾರ ಅಭಿವೃದ್ಧಿಪಡಿಸಲು ಜಾಸ್ತಿ ವೆಚ್ಚವಾಗುತ್ತವೆ. ಹಾಗೂ ಮಾರುಕಟ್ಟೆಯಲ್ಲಿ ಐ.ವಿ.ದ್ರಾವಣಗಳು ಕಡಿಮೆ ದರದಲ್ಲಿ ಲಭ್ಯವಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿನ ತಯಾರಿಕಾ ಘಟಕವನ್ನು ಮುಚ್ಚಲು ತೀರ್ಮಾನ ತೆಗೆದುಕೊಂಡಿತು. ಆದಾಗ್ಯೂ, ಒಂದು ಅಥವ ಎರಡು ಕಡೆಗಳಲ್ಲಿ ಐ.ವಿ. ದ್ರಾವಣಗಳ ತಯಾರಿಕೆಯನ್ನು ಪುನರಾರಂಭಿಸುವ ಬಗ್ಗೆ ಸರ್ಕಾರ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ. ಈ ಸಮಿತಿಯ ಸದಸ್ಯರು ಸರ್ಕಾರಕ್ಕೆ ಈ ಘಟಕಗಳನ್ನು ಪುನರಾರಂಭಿಸುವ ಸಾಧ್ಯತೆ ಮತ್ತು ಐ.ವಿ. ದ್ರಾವಣವನ್ನು ತಯಾರಿಸಬೇಕೇ ಅಥವ ಬೇಡವೇ ಎಂಬುದರ ಬಗ್ಗೆ ಅಂತಿಮ ಸಲಹೆಯನ್ನು ನೀಡಲು ಸೂಚಿಸಲಾಗುವುದು.

1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು — ಅಧ್ಯಕ್ಷರು.

2) ಶ್ರೀ ಆರ್. ಆನಂದರಾಜಶೇಖರ್, ಔಷಧ ನಿಯಂತ್ರಕರು — ಸದಸ್ಯರು.

3) ಹಣಕಾಸು ಇಲಾಖೆಯ ಪ್ರತಿನಿಧಿ — ಸದಸ್ಯರು.

4) ಶ್ರೀ ಕೆ. ಪ್ರೇಮಾನಂದ ಶೆಟ್ಟಿ, ನಿವೃತ್ತ ಔಷಧ ನಿಯಂತ್ರಕರು, ಕರ್ನಾಟಕ ಸರ್ಕಾರ. — ಸದಸ್ಯರು.

5) ಶ್ರೀ ಪಿ.ಎಸ್. ಭಗವಾನ್, ಉಪ ನಿರ್ದೇಶಕರು (ಫಾರ್ಮಸಿ) ಸದಸ್ಯ ಕಾರ್ಯದರ್ಶಿಗಳು.

ಈ ಸಮಿತಿಯು ಎರಡು ತಿಂಗಳ ಅವಧಿಯಲ್ಲಿ ತನ್ನ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

+ ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇಡೀ ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ 1970-71ರಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆ, ಬೆಂಗಳೂರಿನ ಲೇಡಿ ಕರ್ಜನ್ ಆಸ್ಪತ್ರೆ, ಕೆಎಂಸಿ ಆಸ್ಪತ್ರೆ ಹುಬ್ಬಳ್ಳಿ- ಈ ಘಟಕಗಳಲ್ಲಿ ಆದು ಆರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೂ ಕೂಡ ತಯಾರಾದ ಐ.ವಿ. ಫ್ಲೂಯಿಡ್ ಇರಬಹುದು, ಆದರೆ ಇದಲ್ಲದೆ ನಾವು ಇನ್ನೂ ಪ್ರಮುಖವಾದ ಔಷಧಗಳನ್ನು ಆಸ್ಪತ್ರೆಗಳ ಫಾರ್ಮಸಿಗಳಲ್ಲಿ ತಯಾರು ಮಾಡುತ್ತಿದ್ದೇವೆ. ಕೇವಲ ಈ ಮೂರು ಆಸ್ಪತ್ರೆಗಳಲ್ಲಿ ಅಲ್ಲ 14 ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಲ್ಲಿ ಸಹ ಈ ಔಷಧಗಳನ್ನು ಕಳೆದ ವರ್ಷದಿಂದಲೂ ಕೂಡ ತಯಾರು ಮಾಡಲಾಗುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಇದ್ದ ಸರ್ಕಾರದ ಘೋಷಣೆ Health for All in 2000 ಕರ್ನಾಟಕ ರಾಜ್ಯದಲ್ಲಿ 2000ರ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಕೊಡುತ್ತೇವೆನ್ನುವ ಘೋಷಣೆಯನ್ನು ನಾವೆಲ್ಲರೂ ಹಾಕಿಕೊಂಡು ಬಂದಿದ್ದೇವೆ; ನಾವು ಅದನ್ನು ಕೇಳಿದ್ದೇವೆ. ಆದರೆ ಯಾವ ಎರಡು ಸಾವಿರ ವರ್ಷದ ಆರಂಭದ ಮೊದಲ ದಿವಸದಿಂದಲೇ ಹೊಸ ಮಿಲೇನಿಯಂಗೆ ರಾಜ್ಯಸರ್ಕಾರ ಕೊಟ್ಟ ಕೊಡುಗೆ ಏನೆಂದರೆ, ಯಾರಿಗೆ ಉಚಿತವಾಗಿ ಔಷಧ ಕೊಡುವ ಏನೊಂದು ವ್ಯವಸ್ಥೆ ಇತ್ತೋ ಆ ಘಟಕಗಳನ್ನು ಮುಚ್ಚಿರುವಂತಹದ್ದು. ಇಲ್ಲಿ ಉತ್ತರದಲ್ಲಿ ಅನೇಕ ವಿಚಾರಗಳನ್ನು ಹೇಳಲಾಗಿದೆ, ಆ ಬಗ್ಗೆ ನಂತರ ಮಾತನಾಡುತ್ತೇನೆ. ಏಕೆಂದರೆ ಒಂದು ದಿವಸಕ್ಕೆ 40-45 ಸಾವಿರ ರೋಗಿಗಳ ಪ್ರಶ್ನೆ ಇದಾಗಿದೆ. ಇದರಲ್ಲಿ ಐ.ವಿ. ಫ್ಲೂಯಿಡ್ ಜೊತೆಗೆ dextrose, DNN, saline water for injection, peretomial dialysis, heamodialysis, astrophin sulphide. ಈ ಔಷಧಗಳನ್ನು ತಯಾರು ಮಾಡತಕ್ಕಂಥದ್ದು ಈ ರಾಜ್ಯದಲ್ಲಿ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ.

12.20 ಪಿ.ಎಂ.

ಇವತ್ತಿನವರೆಗೆ, ಈ ಮೂವತ್ತು ವರ್ಷಗಳಲ್ಲಿ ಈ ಔಷಧಿಗಳ ತಯಾರಿಕೆಯಲ್ಲಿ ಕ್ವಾಲಿಟಿ ಇಲ್ಲವೆಂದು ಯಾವತ್ತಾದರೂ, ಎಲ್ಲಿಂದಾದರೂ ನಿಮಗೆ ರಿಪೋರ್ಟ್ ಬಂದಿದೆಯೇ ಅಥವಾ ಯಾವತ್ತಾದರೂ ಈ ಘಟಕಗಳಿಗೆ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನಿಂದ ನೋಟೀಸ್ ಸರ್ವ್ ಆಗಿದೆಯೇ? ಇವತ್ತಿನವರೆಗೂ ನೋಟಿಸ್ ಸರ್ವ್ ಆಗಿಲ್ಲ. ಈಗ ಅವರು ಹೇಳಿದಂಥ ವಿಚಾರಗಳನ್ನು ನಾವು ಬಹಳ ಸ್ವಾರಸ್ಯವಾಗಿ ತೆಗೆದುಕೊಳ್ಳುತ್ತೇವೆ. ಅಂದರೆ, ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್‌ನವರು ಕೊಟ್ಟಿರುವಂಥಾದ್ದನ್ನು ಅಡ್ವರ್ಸ್ ಆಗಿ ತೆಗೆದುಕೊಳ್ಳುವಂಥ ವಿಚಾರಗಳು ನಮ್ಮಲ್ಲಿಲ್ಲ. ಬಹಳ ಮುಖ್ಯವಾದಂಥ ವಿಚಾರವೆಂದರೆ, ಆಸ್ಪತ್ರೆಗಳ ಘಟಕಗಳಲ್ಲೇ ಔಷಧಿಗಳನ್ನು ತಯಾರು ಮಾಡಿ ಅಲ್ಲೇ ಕೊಡುವಂಥ ವ್ಯವಸ್ಥೆ ಇತ್ತು. ಹ್ಯೂಮನ್ ರೈಟ್ಸ್ ಕಮೀಷನ್ನಿನ ವಿಚಾರವನ್ನು

ಮಾನ್ಯ ಮಂತ್ರಿಯವರು ಇಲ್ಲಿ ಹೇಳಿದರು. ಇದಕ್ಕೆ ಸಂಬಂಧಪಟ್ಟಹಾಗೆ 1985ರಲ್ಲೀ ಹ್ಯೂಮನ್ ರೈಟ್ಸ್ ಕಮೀಷನ್ ತನ್ನ ವಿಚಾರವನ್ನು ಕೊಟ್ಟಿತ್ತು. ಹ್ಯೂಮನ್ ರೈಟ್ಸ್ ಕಮೀಷನ್ನಿನ ಶೆಲ್ಟರ್ ತೆಗೆದುಕೊಂಡು ತಾವು ಇವುಗಳನ್ನು ಮುಚ್ಚಬೇಕು ಎನ್ನುವ ವಿಚಾರವನ್ನು ಮಾಡಿದ್ದೀರಿ. ಆದರೆ ಹ್ಯೂಮನ್ ರೈಟ್ಸ್ ಕಮೀಷನ್ ಎಲ್ಲಿಯೂ ಕೂಡ ಈ ಘಟಕಗಳನ್ನು ಮುಚ್ಚಿ ಎಂದು ಹೇಳಿಲ್ಲ. ಅವರು ಪ್ರಮುಖವಾಗಿ ಹೇಳಿರುವಂಥ ವಿಚಾರಗಳೆಂದರೆ, ಸ್ವಚ್ಛತೆಯನ್ನು ಕಾಪಾಡುವಂಥಾದ್ದು, ಔಷಧಿಗಳನ್ನು ತುಂಬುವಂಥ ಬಾಟಲ್‌ಗಳ ವ್ಯವಸ್ಥೆಯನ್ನು ಸರಿ ಮಾಡುವಂಥಾದ್ದು, ಏರ್ ಹ್ಯಾಂಡ್ಲಿಂಗ್ ಸಿಸ್ಟಮ್ ಅನ್ನು ಇಡಬೇಕು ಎನ್ನುವ ಪ್ರಮುಖವಾದ ವಿಚಾರಗಳ ಬಗ್ಗೆ ಆಸ್ಪತ್ರೆಗಳಲ್ಲಿ ಹೆಚ್ಚು ಬಲವರ್ಧನೆ ಮಾಡಬೇಕು ಎನ್ನುವ ವಿಚಾರಗಳನ್ನು ಮಾತ್ರ ಹೇಳಿದರೇ ಹೊರತು ಎಲ್ಲಿಯೂ ಕೂಡ ಈ ಘಟಕಗಳನ್ನು ಮುಚ್ಚಬೇಕು ಎನ್ನುವ ವಿಚಾರವನ್ನು ಹೇಳಿರಲಿಲ್ಲ, ಆದರೆ ಜೊತೆಗೆ, ಔಷಧಿ ತುಂಬಲು ಉಪಯೋಗಿಸುವಂಥ ಬಾಟಲ್‌ಗಳು ಫಸ್ಟ್‌ಗ್ರೇಡಿನಲ್ಲಿ (I Grade) ಇರಬೇಕು ಎನ್ನುವ ವರದಿಯನ್ನು ಕೂಡ ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಅವರು ಹೇಳಿರುವ ಇನ್ನೊಂದು ಪ್ರಮುಖವಾದ ವಿಚಾರವೆಂದರೆ, ಐವಿ ಫ್ಲೂಯಿಡ್ ಬಾಟಲ್‌ಗಳು ಮಿನಿಮಂ ಹ್ಯಾಂಡ್ಲಿಂಗ್ ಆಗಿರಬೇಕು ಎನ್ನುವುದು, ಏಕೆ ಈ ರಿಪೋರ್ಟಿನ ವಿಚಾರ ಬಂತೆಂದರೆ, ಯಾರಿಗೆ ನೀವು ಕೋಟ್ಯಾಂತರ ರೂಪಾಯಿಗಳ ಐವಿ ಫ್ಲೂಯಿಡ್ ಅಥವಾ ಬೇರೆಯದನ್ನು ಖರೀದಿ ಮಾಡಲು ಕೋರ್ ಹೆಲ್ತ್ (Core Health Case) ಆರ್ಡರ್ ಕೊಟ್ಟಿದ್ದೀರೋ, ಅವರ ವಿರುದ್ಧವಾಗಿಯೇ ಹ್ಯೂಮನ್ ರೈಟ್ಸ್ ಕಮೀಷನ್‌ರವರು ಹೇಳಿರುವುದು, ದೆಹಲಿಯಲ್ಲಿ ಅವರು ಕೊಟ್ಟಂಥ ಬಾಟಲ್‌ಗಳು ಕಂಟ್ಯಾಮಿನೇಷನ್ ಆಗಿದೆ ಎನ್ನುವ ಆಧಾರದ ಮೇಲೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಸಹ ಕೊಟ್ಟಿದೆ, ಯಾರ ವಿರುದ್ಧವಾಗಿ ಹ್ಯೂಮನ್ ರೈಟ್ಸ್ ಕಮೀಷನ್‌ರವರು ಆರ್ಡರ್ ಕೊಟ್ಟಿದ್ದಾರೋ, ಜಡ್ಜ್‌ಮೆಂಟ್ ಪಾಸ್ ಮಾಡಿದ್ದಾರೋ, ಆ ಹೆಲ್ತ್ ಕೇರ್ ಯೂನಿಟ್‌ನವರಿಂದಲೇ ನೀವು ಖರೀದಿ ಮಾಡುವಂಥ ವ್ಯವಸ್ಥೆ ಮಾಡುತ್ತಿದ್ದೀರಿ, ಒಂದು ವರ್ಷಕ್ಕೆ ಬೇಕಾಗುವಷ್ಟನ್ನು ಖರೀದಿ ಮಾಡಲು ಹೊರಟಿದ್ದೀರಿ. ಆಸ್ಪತ್ರೆಯಲ್ಲಿನ ಘಟಕಗಳನ್ನು ಮುಚ್ಚಿ ಖಾಸಗಿಯವರಿಗೆ ಕೊಡುವ ವ್ಯವಸ್ಥೆಯನ್ನು ಮಾಡುವ ದೃಷ್ಟಿಯಲ್ಲಿ ತಾವು ಏಕೆ ಹೆಜ್ಜೆಯನ್ನು ಇಟ್ಟಿದ್ದೀರಿ ಎನ್ನುವ ಪ್ರಮುಖವಾದ ಪ್ರಶ್ನೆ ಇದರಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರು ಕಾಲಿಂಗ್ ಅಟೆನ್‌ಷನ್‌ನಲ್ಲಿ ಕ್ಲಾರಿಫಿಕೇಷನ್ ಮಾತ್ರ ಕೇಳುವುದಕ್ಕೆ ಅವಕಾಶವಿದೆ. ಒಂದು ವೇಳೆ ಈ ವಿಚಾರದಲ್ಲಿ ವಿವರವಾದ ಚರ್ಚೆಯನ್ನು ಮಾಡಬೇಕು ಎನ್ನುವುದಾದರೆ, ಬೇರೆ ನಿಯಮಗಳ ಪ್ರಕಾರ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ ಸುಧೀರ್ಘವಾದಂಥ, ವಿವರವಾದಂಥ ಚರ್ಚೆಯನ್ನು ಮಾಡುವುದಕ್ಕೆ ಮಾನ್ಯ ಸದ್ಯಸರು ಇಚ್ಛಿಸಿದರೆ ಅವಕಾಶವನ್ನು ಪಡೆದುಕೊಳ್ಳಬಹುದು. ಈಗ ಕೇಳುತ್ತಿರುವಂಥ ನಿಯಮಕ್ಕೆ ಒಂದು ಬದ್ಧತೆ ಇರುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಈ ವಿಚಾರದ ಬಗ್ಗೆ ಮಾತನಾಡುತ್ತಿರುವುದಕ್ಕೆ 'ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅವರ ಕಷ್ಟ ನನಗೆ ಗೊತ್ತಾಗಿದೆ. ಅವರಿಗೆ ಇದನ್ನು ಆಗುತ್ತಿಲ್ಲ. ಅವರು ಸರ್ಕಾರದ ಒಳಗಡೆ ಇದ್ದು ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಎಷ್ಟು ಗಲಾಟೆ ಮಾಡಿದ್ದಾರೆ ಎನ್ನುವ ಅರಿವು ನನಗೆ ಇದೆ. ಆದರೆ ಅವರಿಗೆ ಹೇಳಲು ಆಗುತ್ತಿಲ್ಲ. ಈ ಬಗ್ಗೆ ಅವರಿಗೆ ನೋವು ಇದೆ ಎಂದು ನನಗೆ ಗೊತ್ತಿದೆ.

ಅಧ್ಯಕ್ಷರು : ನೀವು ಹೇಳಬೇಕಾಗಿರುವುದನ್ನು ಸೂಕ್ಷ್ಮವಾಗಿ ಹೇಳಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಆ ವಿಷಯದ ಗ್ರಾವಿಟಿ ಎಷ್ಟಿದೆ ಎನ್ನುವುದನ್ನು ತಿಳಿದುಕೊಂಡು ಅವರು ಮಾತನಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಗ್ರಾವಿಟಿ ಇರುವುದರಿಂದಲೇ ಭೂಮಿ ನಿಂತಿದೆ. ಗ್ರಾವಿಟಿ ಇಲ್ಲದಿದ್ದರೆ ಭೂಮಿ ಎಲ್ಲಿ ನಿಲ್ಲುತ್ತಿತ್ತು. ಆ ವಿಷಯ ಪ್ರಮುಖವಾಗಿದೆ. ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ; ವಿಷಯ ಪ್ರಮುಖವಾದುದು, ಗಂಭೀರವಾದುದು ಎನ್ನುವುದು ನನಗೆ ಗೊತ್ತಿದೆ, ಆದರೆ. ಚರ್ಚೆ ಮಾಡುವುದಕ್ಕೆ ಬೇರೆ ವಿಧಾನಗಳನ್ನು ಬಳಸಿಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಬಗ್ಗೆ ಅರ್ಧತಾಸಿನ ಅಥವಾ ಒಂದು ತಾಸಿನ ಚರ್ಚೆಗೆ ಅವಕಾಶಕೊಡಿ ಎಂದು ತಾವು ಸ್ಪೀಕರ್‌ಗೆ ಹೇಳಿದರೆ ಆಗ ಅದರಂತೆ ಚರ್ಚೆ ಮಾಡೋಣ.

ಡಾ|| ಎ.ಬಿ. ಮಾಲಕರೆಡ್ಡಿ : ಇಲ್ಲಿ ಡಿಮ್ಯಾಂಡ್ಸ್ ಬರುತ್ತದೆ. ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ : ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ. ಅವರು ಉತ್ತರ ಕೊಡಲು ಅನುಕೂಲವಾಗುವಂತೆ, ಅವರಲ್ಲಿರುವಂಥ ಮಾಹಿತಿಯನ್ನು ಕೊಟ್ಟರೆ ಸಮಂಜಸವಾದಂಥ ಉತ್ತರ ಕೊಡುವುದಕ್ಕೆ ಆಗುತ್ತದೆ ಎನ್ನುವ ಭಾವನೆಯಿಂದ ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಬೇರೆ ನಿಯಮಗಳ ಪ್ರಕಾರ ವಿಷಯವನ್ನು ತಂದರೆ, ಇದಕ್ಕೆ ಸಂಬಂಧಿಸಿದಂತೆ ಬಹಳ ವಿಷಯವನ್ನು ಚರ್ಚೆ ಮಾಡಬಹುದು, ಸರಿಯಾದಂಥ ರೀತಿಯಲ್ಲಿ, ಸದನದ ಗಮನಕ್ಕೆ ತರಬಹುದು. ನೀವು ಇದನ್ನು ಗಮನ ಸೆಳೆಯುವ ಸೂಚನೆಯಲ್ಲಿ ಹೇಳಲು ಹೋದರೆ ಅರ್ಥಂಬರ್ಥವಾಗುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಒಳ್ಳೆಯ ವಿಚಾರವನ್ನು ಹೇಳಿದರು. ಸನ್ಮಾನ್ಯ ಮಂತ್ರಿಗಳಲ್ಲಿ ಒಂದು ವಿಚಾರವನ್ನು ನಾನು ಹೇಳುವುದೇನೆಂದರೆ, ನಾನು ಇದನ್ನು ಗಮನ ಸೆಳೆಯುವ ಸೂಚನೆ ಎಂದು ಕೇಳಿರಲಿಲ್ಲ. ಇದು ಬಹಳ ಪ್ರಮುಖವಾದ ವಿಚಾರ ಎಂದು ಸನ್ಮಾನ್ಯ ಅಧ್ಯಕ್ಷರಲ್ಲಿ ನಿಯಮ 69ರಡಿಯಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ಅಡ್ಜರ್ನ್‌ಮೆಂಟ್ ಮೋಷನ್ ಅನ್ನೇ ಕೇಳಿದ್ದರು.

SRI KAGODU THIMMAPPA : If it is a major subject matter which needs to be gone in detail, Hon'ble Member can raise this matter under some other rule, if the so desires.

ಶ್ರೀ ಎ. ರಾಮದಾಸ್ : ನಾನು ಈ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೇಳಿದ್ದೆ. ಇದು ಇಡೀ ರಾಜ್ಯದ ಪ್ರಶ್ನೆಯಾಗಿರುವುದರಿಂದ, ತಾವು ದಯವಿಟ್ಟು ಇದರ ಗಂಭೀರತೆಯನ್ನು ಅರಿತು ನಿಯಮ 69 ರಡಿಯಲ್ಲಿ ಅವಕಾಶ ಕೊಟ್ಟರೆ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ. ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು ಹಾಗೇ ಮಾಡೋಣ; ನಿಯಮ 69ರಡಿಯಲ್ಲೇ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಬಹುಶಃ ಮುಂದಿನ ಮಂಗಳವಾರ ಅಥವಾ ಬುಧವಾರ ತೆಗೆದುಕೊಳ್ಳೋಣ. ಈಗ ಶಾಸನ ರಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಕಳೆದ ಒಂದು ವಾರದಿಂದ ತಮ್ಮ ಕಛೇರಿಗೆ ಬಂದು ಆ ಕಣ್ಣು ಕಳೆದುಕೊಂಡವರ ಬಗ್ಗೆ ಪ್ರಸ್ತಾಪ ಮಾಡಲು ಜೀರೋ ಹವರ್‌ನಲ್ಲಿ ಅವಕಾಶ ಕೊಡಬೇಕು ಎಂದು ಕೇಳುತ್ತಲೇ ಇದ್ದೇನೆ. ಅವರಿಗೆ ಬಹಳ ಸಮಸ್ಯೆಯಾಗಿದೆ. ಮಾನ್ಯ ಆರೋಗ್ಯ ಸಚಿವರೂ ಸದನದಲ್ಲಿದ್ದಾರೆ. ದಯಮಾಡಿ ತಾವು ಕೇವಲ ಎರಡು ನಿಮಿಷ ಅವಕಾಶ ಮಾಡಿಕೊಡಬೇಕು. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಅದನ್ನು ತಾವು ಜೀರೋ ಹವರ್‌ನಲ್ಲೇ ಹೇಳಬೇಕಾಗಿತ್ತು. ಎರಡು ನಿಮಿಷಗಳಲ್ಲಿ ಮುಗಿಸುವ ಹಾಗಿದ್ದರೆ ತೆಗೆದುಕೊಳ್ಳೋಣ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಮೈಸೂರಿನಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮದಲ್ಲಿ ಕಣ್ಣುಗಳಲ್ಲಿ ದೃಷ್ಟಿ ನಷ್ಟ ಉಂಟಾಗಿರುವ ಬಗ್ಗೆ

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಸನ್ಮಾನ್ಯ ಅಧ್ಯಕ್ಷರೇ, ಮೊದಲು ತಮಗೆ ಧನ್ಯಾವಾದಗಳನ್ನು ಅರ್ಪಿಸುತ್ತೇನೆ. ಮೈಸೂರಿನಲ್ಲಿ ಡೆನ್ಮಾರ್ಕ್ ನೆರವಿನಿಂದ ಜನವರಿ 31, ಪೆಬ್ರವರಿ 1 ಮತ್ತು 4ನೇ ತಾರೀಖುಗಳಂದು ನಾಲ್ಕು ಆಸ್ಪತ್ರೆಗಳಲ್ಲಿ 54 ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಮಾಡಲಾಯಿತು. ಇದರಲ್ಲಿ ಜೆ.ಕೆ. ನರ್ಸಿಂಗ್ ಹೋಂನಲ್ಲಿ ಏಳು ಜನರಿಗೆ ಅಪರೇಷನ್ ಮಾಡಲಾಯಿತು. ಆ ಏಳು ಜನರೂ ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ಇವರಲ್ಲಿ ಇಬ್ಬರಿಗೆ ಮೊದಲೇ ಒಂದು ಕಣ್ಣು ಕಾಣುತ್ತಿರಲಿಲ್ಲ, ಇನ್ನೊಂದು ಕಣ್ಣಿನ ಆಪರೇಷನ್‌ಗೆ ಹೋದರು. ಈಗ ಅವರು ಸಂಪೂರ್ಣವಾಗಿ ಕುರುಡರಾಗಿದ್ದಾರೆ. ಡೆನ್ಮಾರ್ಕಿನ ನೆರವಿನಿಂದ ಬರುವಂಥ ಸ್ಪೆಸಿಫಿಕೇಷನ್ ಪ್ರಕಾರ ಯಾರಿಗೆ ಕೊಡಬೇಕು ಎನ್ನುವ ವಿಚಾರವಿತ್ತೋ, ಅದಕ್ಕೆ ವಿರುದ್ಧವಾಗಿ ಪರಿಣತೆ ಇಲ್ಲದಂಥ ಖಾಸಗಿ ಹೋಂಗಳಲ್ಲಿ ಆಪರೇಷನ್ ಮಾಡಿಸಿರುವಂಥಾದ್ದು ಬಹಳ ನೋವಿನ ಸಂಗತಿ. ಇದರಲ್ಲಿ ಪ್ರಮುಖವಾಗಿ ಹೆಗ್ಗಡದೇವನ ಕೋಟೆಯ ಅದೇ ತಾಲ್ಲೂಕಿನ ಕಾಗೇಗುಂಡಿ ಗ್ರಾಮದ ಮಹದೇವಮ್ಮ ಮತ್ತು ಚಿಕ್ಕನಾಡಿನ, ಎರಡೂ ಕಾಲುಗಳಿಲ್ಲದಂಥ ಅಂಗವಿಕಲನಾದಂಥ ಸಿದ್ದಾಚಾರ್ ಎನ್ನುವವರು ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ಅದರ ಜೊತೆಯಲ್ಲಿ ಕೆಂಚನಹಳ್ಳಿಯ ರೇವಣ್ಣ ಎನ್ನುವವನು ಕೂಡ ಎರಡು ಕಣ್ಣುಗಳನ್ನೂ ಕಳೆದುಕೊಂಡಿದ್ದಾನೆ. ಏಳು ಜನರಿಗೆ ಅಪರೇಷನ್ ಮಾಡಿದ್ದರೂ,

ಇವತ್ತು ಎನ್‌ಕ್ವರಿ ರಿಪೋರ್ಟ್‌ನಲ್ಲಿ ಯಾವತ್ತು ಆಪರೇಷನ್ ಮಾಡಿದ್ದಾರೆ ಎನ್ನುವಂಥ ವಿಚಾರವನ್ನು ಹೇಳಿಲ್ಲ. ಜೊತೆಗೆ, ಕಣ್ಣು ಕಳೆದುಕೊಂಡಂಥವರು ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೆಂಟ್ ಕೊಟ್ಟರೂ ಕೂಡ ಕಂಪ್ಲೆಂಟನ್ನು ರಿಸೀವ್ ಮಾಡದೇ ಇರುವಂಥ ವ್ಯವಸ್ಥೆ ಈ ಸರ್ಕಾರದಲ್ಲಿದೆ ಎನ್ನುವುದು ಬಹಳ ನೋವಿನ ಸಂಗತಿ. ಈ ನರ್ಸಿಂಗ್ ಹೋಂ ಪ್ರಾರಂಭವಾಗಿದ್ದು ಸೆಪ್ಟೆಂಬರ್ 1999ರಲ್ಲಿ. ಆವತ್ತಿನಿಂದ ಇವತ್ತಿನವರೆಗೆ ಈ ನರ್ಸಿಂಗ್ ಹೋಂನಲ್ಲಿ ಎಷ್ಟು ಆಪರೇಷನ್‌ಗಳನ್ನು ಮಾಡಲಾಗಿದೆ ಎನ್ನುವ ಪ್ರಶ್ನೆಗೆ ಅಲ್ಲಿಯ ಪ್ರಮುಖರು ಉತ್ತರ ಕೊಡದೇ ಇರುವಂಥ ವ್ಯವಸ್ಥೆ ಅಲ್ಲಿ ಇದೆ. ಬೇರೆ ದೇಶದಿಂದ ನೆರವು ಪಡೆದುಕೊಂಡು ಕಣ್ಣಿನ ಆಪರೇಷನ್ ಮಾಡಿದಂಥವರಲ್ಲಿ ಈ ಏಳು ಜನರ ಬಗ್ಗೆ ಮಾತ್ರ ವರದಿ ಏನಾಗಿದೆ ಎಂದರೆ, ಅವರ ಕಣ್ಣುಗಳಲ್ಲಿ ಕೀವು ತುಂಬಿಕೊಂಡು, ಕಣ್ಣಿನ ಭಾದೆ ಜಾಸ್ತಿಯಾದ ನಂತರ ಆ ಏಳು ಜನಗಳ ಕಣ್ಣಿನ ಗುಡ್ಡೆಗಳನ್ನು ತೆಗೆದು ಹಾಕಲಾಗಿದೆ. ಅದರ ಎನ್‌ಕ್ವೈರಿ ರಿಪೋರ್ಟ್ ಈಗಾಗಲೇ ಸರ್ಕಾರಕ್ಕೆ ತಲುಪಿದೆ ಎಂದು ನಾನು ಅಂದುಕೊಂಡಿದ್ದೇನೆ. ಅದರ ಪ್ರಕಾರವಾಗಿ ಸುಮಾರು 50 ಜನಗಳಿಗಿಂತಲೂ ಹೆಚ್ಚು ಜನ ಕಣ್ಣು ಕಳೆದುಕೊಂಡಿದ್ದಾರೆ ಆದರೆ ಅವರಿಗೆ ಕಣ್ಣಿನ ನೋವು ಇರುವುದರಿಂದ ಅವರು ಬಂದು ಹೇಳಿಕೊಳ್ಳಲು ಆಗುತ್ತಿಲ್ಲ. ಈ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಕೂಡ ಬರೆದಿದ್ದೆ. ಆದಕ್ಕೆ ಅವರು, ಇದಕ್ಕೆ ಸಂಬಂಧಪಟ್ಟಹಾಗೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಉತ್ತರ ಬರೆದು ತಿಳಿಸಿದ್ದರು. ಎನ್‌ಕ್ವೈರಿ ಆಗಿದ್ದರೆ, ತಾವು ಏಕೆ ಕ್ರಮ ತೆಗೆದುಕೊಂಡಿದ್ದೀರಿ, ಕಣ್ಣು ಕಳೆದುಕೊಂಡವರಿಗೆ ಪರಿಹಾರ ಕೊಡುವಂಥ ವ್ಯವಸ್ಥೆ ಏನು? ಆ ನರ್ಸಿಂಗ್ ಹೋಂ ಮೇಲೆ ತಾವು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವಿರೇನು? ಅವರೆಲ್ಲರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ವಿಶೇಷವಾಗಿ ಬಡವರ ಬಗ್ಗೆ ತಮಗೆ ಏನು ಕಾಳಜಿ ಇದೆ? ಅದರ ಬಗ್ಗೆ ತಾವು ತೆಗೆದುಕೊಂಡ ಕ್ರಮಗಳೇನು? ಎಂದು ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ಕೇಳಲು ಇಚ್ಛೆಪಡುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 3-4 ದಿವಸಗಳ ಹಿಂದೆ ಸದರಿ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಆದರೆ ಇವತ್ತು ಅದರ ಪೂರ್ಣ ಮಾಹಿತಿ ಇಲ್ಲ. ಅದರೂ ಸಹ ಮಾನ್ಯ ಸದಸ್ಯರು ಇಲ್ಲಿ ಏನು ಭಾವನೆಯನ್ನು ವ್ಯಕ್ತಮಾಡಿದ್ದಾರೆ ಅದಕ್ಕೆ ಸರ್ಕಾರದ ಸಂಪೂರ್ಣ ಸಹಮತ ಇದೆ. ಹೆಸರಾಂತ ನೇತ್ರ ತಜ್ಞರು ರಾಜೀವಗಾಂಧಿ ಹೆಲ್ತ್ ಯೂನಿವರ್ಸಿಟಿಯ ಕುಲಸಚಿವರು ಆದಂಥ ಡಾ| ಚಂದ್ರಶೇಖರ್ ಶೆಟ್ಟಿಯವರ ನೇತೃತ್ವದಲ್ಲಿ ಈಗಾಗಲೇ ಒಂದು ಎನ್‌ಕ್ವಯರಿ ಕಮಿಟಿಯನ್ನು ಮಾಡಿದ್ದೇವೆ. ಸದರಿ ಪ್ರಕರಣದ ಬಗ್ಗೆ ವಿಚಾರಣೆ ಮಾಡಿ ತಕ್ಷಣ 15 ದಿವಸಗಳಲ್ಲಿ ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಅವರಿಗೆ ತಿಳಿಸಬೇಕೆಂದು ಅವರಿಗೆ ತಿಳಿಸಿದ್ದೇವೆ. ವರದಿ ಬಂದ ಮೇಲೆ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಅತ್ಯಂತ ಕಠಿಣ ಕ್ರಮವನ್ನು ಕೈಗೊಳ್ಳುತ್ತೇವೆ. ಕಣ್ಣಿನ ಅಪರೇಷನ್ ಅಗಿರುವಂಥಾದ್ದು ಸರ್ಕಾರಿ ಅಸ್ಪತ್ರೆ ಅಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಅದು ಯಾವುದೋ ಒಂದು ಖಾಸಗಿ ನರ್ಸಿಂಗ್ ಹೋಂ ಆಗಿರುತ್ತದೆ. ಜಿಲ್ಲಾ ಅಂಧತ್ವ ನಿಯಂತ್ರಣ ಸಮಿತಿಯ ನೇತೃತ್ವದಲ್ಲಿ ಇಂಥ ಒಂದು ಕಾರ್ಯಕ್ರಮ ಆಗಾಗ್ಗೆ ಜರುಗುತ್ತಿರುತ್ತದೆ. ಮೊದಲೆಲ್ಲ ಕ್ಯಾಂಪೇನ್ ಮಾಡುತ್ತಿದ್ದರು. ಇತ್ತೀಚಿಗೆ

ಸರ್ಕಾರ ಅದನ್ನು ನಿರ್ಬಂಧನೆ ಮಾಡಿ ಕೇವಲ ಇನ್‌ಸ್ಟಿಟ್ಯೂಶನ್‌ನಲ್ಲಿ ಅಷ್ಟೇ ಮಾಡಬೇಕೆಂದು ಮಾಡಲಾಗಿದೆ. Introcular Lens Operation ಎನ್ನುವುದು...ಬಹಳ ಸೂಕ್ಷ್ಮವಾದ ಅಪರೇಷನ್ ಮತ್ತು ಸ್ವಲ್ಪ ಸಂಕೀರ್ಣವಾದ ಅಪರೇಷನ್-ಆಗಿರುವುದರಿಂದ ಇನ್‌ಸ್ಟಿಟ್ಯೂಶನ್‌ನಲ್ಲಿ ಮಾಡತಕ್ಕಂಥದ್ದು; ಹಾಗೆಯೇ ಆ ಇನ್‌ಸ್ಟಿಟ್ಯೂಷನ್‌ನಲ್ಲಿ ಸೂಕ್ತ ಸೌಲಭ್ಯ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲಿಗೆ ಪರ್ಮಿಷನ್ ಕೊಟ್ಟಿದೆ. ಆದರೆ ಈ ಘಟನೆ ಆದಮೇಲೆ ಸದರಿ ನರ್ಸಿಂಗ್ ಹೋಂನ್ನು ಮುಚ್ಚಿದ್ದೇವೆ. ಈಗ ಯಾವ ಆಪರೇಷನ್ ಕೂಡ ಆಗುತ್ತಿಲ್ಲ. ಮುಂದಿನ ವಿಚಾರಣೆ ಬಂದಮೇಲೆ ಆ ವರದಿಯ ಪ್ರಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಕಣ್ಣು ಕಳೆದುಕೊಂಡವರಿಗೆ ಏನಾದರೂ ಪರಿಹಾರವನ್ನು ಸರ್ಕಾರ ಕೊಡುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆ ಪರಿಹಾರವನ್ನು ಕೂಡ ಒದಗಿಸಿಕೊಡುತ್ತೇವೆ. ಇನ್ನೂ ಸಂಬಂಧಪಟ್ಟ ವ್ಯಕ್ತಿಗಳಿಗೆ ಒಂದೊಂದು ಕಣ್ಣಿಗೆ ಆಪರೇಷನ್ ಮಾಡಿರುವುದರಿಂದ ಸಂಪೂರ್ಣವಾದ ದೃಷ್ಟಿಯನ್ನು ಕಳೆದುಕೊಂಡಿಲ್ಲ. ಒಂದು ಕಣ್ಣಿನಲ್ಲಿ ದೃಷ್ಟಿ ಇದೆ. ಯಾವ ಕಣ್ಣಿಗೆ ಆಪರೇಷನ್ ಆಗಿದೆಯೋ ಆ ಕಣ್ಣಿನ ದೃಷ್ಟಿ ಹೋಗಿದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು. ಇದು ಖಾಸಗಿ ನರ್ಸಿಂಗ್ ಹೋಂನಲ್ಲಿ ಮಾಡಿದಂಥ ಆಪರೇಷನ್ ಇರಬಹುದು. ಆದರೆ ಆಪರೇಷನ್ ಮಾಡಿಸಿದವರು ಸರ್ಕಾರದವರು. ಅಂದರೆ ಇದು ಡೆನ್ಮಾರ್ಕಿನ ಸಹಾಯದಿಂದ ಕಣ್ಣಿನ ಆಪರೇಷನ್ ಮಾಡಿಸತಕ್ಕಂಥಾದಕ್ಕೆ ಆ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವಂಥ ಈ ಸಮಿತಿ ಹೆಲ್ತ್ ಡಿಪಾರ್ಟ್‌ಮೆಂಟ್ ವತಿಯಿಂದ ಬಂದಂಥ ಪೇಷಂಟ್‌ಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಅವರೇ ಕಳುಹಿಸಿ ಮಾಡಿಸುವಂಥಾದ್ದು. ಅಂದರೆ ಸರ್ಕಾರವೇ ನೇರವಾಗಿ ಪೇಷಂಟ್‌ಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಅಪರೇಷನ್ಸ್ ಮಾಡಿಸಿದ್ದಾರೆಯೇ ಹೊರತು ಖಾಸಗಿ ನರ್ಸಿಂಗ್ ಹೋಂಗೆ ಪೇಷಂಟ್ ಹೋಗಿಲ್ಲ. ಸರ್ಕಾರದವರೇ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿರುವುದರಿಂದ ಇದಕ್ಕೆ ಸಂಪೂರ್ಣವಾದ ಜವಾಬ್ದಾರಿ ಸರ್ಕಾರದ್ದು ಆಗಿರುತ್ತದೆ. ಈ ಪ್ರಕರಣದ ಬಗ್ಗೆ ರಿಪೋರ್ಟ್ ಬಂದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಮಂತ್ರಿಯವರಿಗೆ ಬಂದಿಲ್ಲದೇ ಇರಬಹುದು. ಕಳೆದ 19ನೇ ತಾರೀಕು ಆ ಸಮಿತಿ ಸರ್ಕಾರಕ್ಕೆ ರಿಪೋರ್ಟ್ ಕೊಟ್ಟಿದೆ. ಅಂದರೆ ಇವತ್ತಿಗೆ 5 ದಿವಸಗಳಾಯಿತು ಸರ್ಕಾರಕ್ಕೆ ವರದಿ ಬರಲಿಲ್ಲವೆಂದು ಹೇಳುತ್ತಾರೆ, ಆದರೆ ಅದರ ಸಂಪೂರ್ಣವಾದಂಥ ವರದಿ ಎಲ್ಲಾ ಪ್ರತಿಕೆಗಳಲ್ಲಿ ಬಂದಿದೆ. ಆದ್ದರಿಂದ ಈ ರಿಪೋರ್ಟ್ ಸರ್ಕಾರಕ್ಕೆ ಬಂದಮೇಲೆ ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ದಯವಿಟ್ಟು ಹೇಳಬೇಕು. ಒಂದು ಕಣ್ಣು ಮಾತ್ರ ಕಾಣುತ್ತಿದ್ದಂಥ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿ ಆ ನರ್ಸಿಂಗ್ ಹೋಂಗೆ ಸೇರಿಸಿದ್ದಾರೆ. ಅದರಲ್ಲಿ ಇಬ್ಬರಿಗೆ ಎರಡೂ ಕಣ್ಣು ಕಾಣಿಸುವುದಿಲ್ಲ 7 ಜನರಿಗೆ ಕಣ್ಣಿನ ಗುಡ್ಡೆಗಳನ್ನೇ ತೆಗೆಯಲಾಗಿದೆ ಎನ್ನುವುದು ಬಹಳ ನೋವಿನ ಸಂಗತಿ. ದಯವಿಟ್ಟು ಇದನ್ನು ಸರ್ಕಾರ ಬಹಳ ಸೀರಿಯಸ್ ಆಗಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದು ಅತ್ಯಂತ ಸೀರಿಯಸ್ ವಿಷಯವೆಂದು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಆದರೆ ಇದು ಸರ್ಕಾರದ್ದು ಅಲ್ಲ. ಜಿಲ್ಲಾಧಿಕಾರಿಯವರು ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ ಎಂಬ ಮಾತ್ರಕ್ಕೆ ಇದು ಸರ್ಕಾರದ ಸಂಸ್ಥೆ ಆಗುವುದಿಲ್ಲ. ಇದು ರಿಜಿಸ್ಟರ್ಡ್ ಸೊಸೈಟಿ ಆಗಿರುತ್ತದೆ. ಅದು ಸರ್ಕಾರದ್ದೇ ಆಗಿದ್ದರೆ ಆ ಸೊಸೈಟಿಯನ್ನು ರಿಜಿಸ್ಟರ್ಡ್ ಏಕೆ ಮಾಡಬೇಕು? ಆದರೂ ಕೂಡ ಇದನ್ನು ಸರ್ಕಾರ ಅತ್ಯಂತ ಗಂಭೀರ ರೀತಿಯಲ್ಲಿ ಪರಿಗಣಿಸಿ ಮಾಡಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿದ್ದೇವೆ, ಆದರೆ ಅದರಲ್ಲಿ ಬಹಳ ಕಾಂಟ್ರಡಿಕ್ಟರಿ ರಿಪೋರ್ಟ್ಸ್ ಇದೆ. ತಾವೇ ಹೇಳಿದಂತೆ, ಆಪರೇಷನ್‌ನ್ನು ಯಾವ ತಾರೀಖು ಮಾಡಿದರು? ಯಾವ ಯಾವ ಪೇಷಂಟ್‌ಗಳನ್ನು ಯಾವ ಯಾವ ತಾರೀಖುಗಳಲ್ಲಿ ಬಂದಿದ್ದಾರೆ? ಇತ್ಯಾದಿ ವಿವರಗಳು ಇದರಲ್ಲಿ ಇಲ್ಲ. ಅದಕ್ಕಾಗಿ ನಾವು ಏಕ ಸದಸ್ಯ ಸಮಿತಿಯನ್ನು ಏನು ನೇಮಕಾತಿ ಮಾಡಿದ್ದೇವೆ ಅವರು ಹೆಸರಾಂತ ವ್ಯಕ್ತಿಗಳು, ದಕ್ಷ ಆಡಳಿತಗಾರರು. ಅವರ ವರದಿ ಬಂದಮೇಲೆ ನಾವು ತಾವು ಎಲ್ಲರೂ ಕೂಡಿ ವಿಚಾರ ಮಾಡಿ ಇವರಿಗೆ ಏನು ಅನುಕೂಲಗಳನ್ನು ಮಾಡಿಕೊಡಬಹುದು, ಯಾವ ರೀತಿಯಲ್ಲಿ ಪರಿಹಾರ ಒದಗಿಸಬಹುದು, ಮುಂದೆ ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಒಂದು ಸ್ಪಷ್ಟೀಕರಣವನ್ನು ಬಯಸುತ್ತಿದ್ದೇವೆ. ಜನತಾದಳ ಜಾತ್ಯಾತೀತ ಪಕ್ಷದ 5 ಜನ ಸದಸ್ಯರು ಈಗಾಗಲೇ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಕೋರಿದ್ದಾರೆ, ಎಂದು ಕೆಲವು ಪತ್ರಿಕೆಗಳಲ್ಲಿ ಬಂದಿದೆ. ಸದನದ ಒಳಗೆ ಅವರಿಗೆ ಪ್ರತ್ಯೇಕವಾದ ಆಸನದ ವ್ಯವಸ್ಥೆ ಆಗಿದೆಯೇ ಎಂದು ಈ ಸಂದರ್ಭದಲ್ಲಿ ಸದನದಲ್ಲಿರುವಂಥ ಒಬ್ಬ ಸದಸ್ಯರಿಗೂ ಗೊತ್ತಿಲ್ಲ. ಇದು ಪತ್ರಿಕೆಗಳಲ್ಲಿ ಮಾತ್ರ ಬಂದಿರುವುದರಿಂದ ಇದರ ಬಗ್ಗೆ ನಾಳೆ ಜನ ನಮ್ಮಲ್ಲಿ ಕೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ತಮ್ಮ ಅವಗಾಹನೆಗೆ ಏನಾದರೂ ಬಂದಿದೆಯೇ?

ಅಧ್ಯಕ್ಷರು : ನಮಗೇನು ಬಂದಿಲ್ಲ. So far I have not yet received any letter. ಆ ಪ್ರಶ್ನೆ ಮುಗಿಯಿತಲ್ಲ.

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಜಾತ್ಯಾತೀತ ಜನತಾದಳ ವಿಭಾಗ ಆಗಿಲ್ಲ. ಜಾತ್ಯಾತೀತ ಜನತಾದಳಕ್ಕೆ ತನ್ನದೇ ಆದಂಥ ಶಕ್ತಿ ಇದೆ. ಇದು ಯಾರದೋ ವ್ಯವಸ್ಥಿತವಾದ ಪಿತೂರಿ. ಈ ಪಿತೂರಿಗೆ ನಮ್ಮ ಪಕ್ಷದ ಯಾರೂ ಸಹ ಶಾಸಕರು ತಲೆಬಾಗುವುದಿಲ್ಲ. ಏಕೆಂದರೆ ಅವರಿಗೆ ಒಂದು ಸಿದ್ಧಾಂತ ಇದೆ.

ಅಧ್ಯಕ್ಷರು : ಬೇರೆ ಬೇರೆ ಪಕ್ಷಗಳ ವಿಚಾರದಲ್ಲಿ ನಾವು ಈ ಸದನದಲ್ಲಿ ಚರ್ಚಿಸುವುದು ಬೇಡ.....

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಇದು ಸದನದೊಳಗೆ ಆಗುವಂಥ ವಿಚಾರ. ಸದನದೊಳಗೆ ಯಾರ್ಯಾರು ಎಷ್ಟೆಷ್ಟು ಸಂಖ್ಯೆಯಲ್ಲಿ ಇದ್ದಾರೆ ಎನ್ನುವ ವಿಚಾರ ಗೊತ್ತಾಗಬೇಕಲ್ಲವೆ.